


ಕುವೆಂಪು ಶತಮಾನೋತ್ಸವ ಮಾಲಿಕೆ -೨೦೦೪

ಜನಸಂಖ್ಯೆ ಅಂದು ಇಂದು ಮುಂದು

ಪ್ರೊ. ಸಿ.ವಿ. ನಾಗರಾಜ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಕುವೆಂಪು ಶತಮಾನೋತ್ಸವ ಮಾಲಿಕೆ-೨೦೦೪

ಜನಸಂಖ್ಯೆ
ಅಂದು ಇಂದು ಮುಂದು

ಪ್ರೊ. ಸಿ. ವಿ. ನಾಗರಾಜ್

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

JANASNKE ANDU INDU MUNDU
by : prof. C. V. Nagaraj
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 72+vi Price : Rs. 25=00 : 2004

ಮುದ್ರಣದ ವರ್ಷ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಕುವೆಂಪು ಶತಮಾನೋತ್ಸವ ಮಾಲಿಕೆ-೨೦೦೪

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯಕ್ಕೆ ಕೊಡಲಾಗಿರುವ ದೇಶದ ಬಹುತೇಕ ಎಲ್ಲ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಗೆ ಮೊದಲು ಪಾತ್ರರಾದ ಗಣ್ಯ ಸಾಹಿತಿ ರಾಷ್ಟ್ರಕವಿ ಕುವೆಂಪು ಅವರು ಕನ್ನಡದ ವರ್ಡ್ಸ್‌ವರ್ತ್ ಎಂದು ಪ್ರಖ್ಯಾತರಾಗಿದ್ದಾರೆ. ಈ ಕವಿಯನ್ನು ಸ್ಮರಿಸುವುದೇ ಒಂದು ಚೇತೋಹಾರಿ ಅನುಭವ.

ಕರ್ನಾಟಕ ಸರ್ಕಾರ ಈ ಮಹಾಕವಿಯ ಶತಮಾನೋತ್ಸವವನ್ನು ಸಾಹಿತ್ಯಕವಾಗಿ ವರ್ಷವಿಡೀ ಆಚರಿಸುತ್ತಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕ ವಿಶ್ವವಿದ್ಯಾಲಯವೆಂದು ಪರಿಗಣಿತವಾಗಿರುವ ಕನ್ನಡ ಸಾಹಿತ್ಯ ಪರಿಷತ್ತು, ಸರ್ಕಾರ ನೀಡಿರುವ ಉದಾರ ಅನುದಾನವನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ಈ ಮಹತ್ವದ ಕವಿಯ ಹೆಸರಿನಲ್ಲಿ **"ಕುವೆಂಪು ಶತಮಾನೋತ್ಸವ ಮಾಲಿಕೆ"** ಯೊಂದನ್ನು ಆರಂಭಮಾಡಿದೆ. ಅಪರೂಪದ ಮೌಲಿಕವಾದ ೧೦೦ ಕೃತಿಗಳನ್ನು ಪ್ರಕಟಿಸುವ ಯೋಜನೆಯೊಂದನ್ನು ಹಾಕಿಕೊಂಡಿದೆ. ಹಲವಾರು ಅಲಭ್ಯ ಪ್ರತಿಷ್ಠಿತ ಕೃತಿಗಳನ್ನು ಮರುಮುದ್ರಣಮಾಡುವುದರ, ಜತೆಗೆ ಇತ್ತೀಚಿನ ಉತ್ತಮ ಕೃತಿಗಳನ್ನು ಮಾಲಿಕೆಯಡಿ ಪ್ರಕಟಿಸಲು ಉದ್ದೇಶಿಸಲಾಗಿದೆ.

ಈ ಕೃತಿಯು ಜನಸಂಖ್ಯಾ ಸಮಸ್ಯೆಗೆ ಸಂಬಂಧಿಸಿದ ಕೆಲವಾರು ವಿಷಯಗಳನ್ನು ಪ್ರಸ್ತಾಪಿಸಿದ ಎಲ್ಲವನ್ನೂ ಒಳಗೊಂಡಿದೆ. ಜನಸಂಖ್ಯಾ ಶಿಕ್ಷಣದ ವಿದ್ಯಾರ್ಥಿಗಳಿಗೂ ಮತ್ತು ಶಿಕ್ಷಕರಿಗೂ ಇದು ಉಪಯುಕ್ತವಾಗಿದೆ. ಈ ಕೃತಿಯನ್ನು ಸಿದ್ಧಪಡಿಸಿರುವ ಪ್ರೊ. ಸಿ.ವಿ.ನಾಗರಾಜ್ ಅವರಿಗೆ ಪರಿಷತ್ತಿನ ಕೃತಜ್ಞತೆಗಳು.

ಪುಸ್ತಕ ಪ್ರಕಟಣೆಗೆ ಆರ್ಥಿಕ ನೆರವು ನೀಡಿ ಉಪಕರಿಸಿರುವ ಕರ್ನಾಟಕ ರಾಜ್ಯ ಸರ್ಕಾರಕ್ಕೆ ವಿನಯ ಪೂರ್ವಕ ಕೃತಜ್ಞತೆ ಸಲ್ಲಿಸುವ ಆದ್ಯ ಕರ್ತವ್ಯ ನಿರ್ವಹಿಸಿ, ಪ್ರಕಟಣೆಗೆ ಹಸಿರುನಿಶಾನೆ ತೋರಿದ ಪ್ರಕಟಣಾ ಸಮಿತಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಒಂದು ಮಾತು

ಜನಸಂಖ್ಯೆಯ ಬೆಳವಣಿಗೆ ನಮ್ಮ ದೇಶಕ್ಕೆ ಒಂದು ಸವಾಲಾಗಿದೆ. ಮಿತಿ ಇಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ ದೇಶದ ಪ್ರಗತಿಗೆ ಮಾರಕವಾಗಿದೆ. ಜನಸಂಖ್ಯಾ ನಿಯಂತ್ರಣ ಇದಕ್ಕೆ ಸೂಕ್ತ ಪರಿಹಾರ. ಸಾಮಾನ್ಯ ಜನರ ಮುಂದೆ ಈ ವಿಷಯವನ್ನು ಸೂಕ್ತ ಮಾಹಿತಿಗಳೊಂದಿಗೆ ಪ್ರಸ್ತಾಪಿಸುವುದು ಅತಿ ಮುಖ್ಯ. ಈ ಉದ್ದೇಶದಿಂದ ವಿವಿಧ ಮೂಲಗಳಿಂದ ಉಪಯುಕ್ತ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆಯೊಂದಿಗೆ ಪ್ರಸ್ತುತ ಪಡಿಸಲಾಗಿದೆ.

ಕರ್ನಾಟಕ ಸರ್ಕಾರವು ಕನ್ನಡ ಜಾಗೃತಿ ವರ್ಷವನ್ನು ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಕನ್ನಡದಲ್ಲಿ ಮಾಹಿತಿಯನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ. ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಕಾರ್ಯಕರ್ತರಲ್ಲದೆ ಇತರ ಇಲಾಖೆಯ ಅಧಿಕಾರಿಗಳು ಮತ್ತು ಉಪನ್ಯಾಸಕರು ಅಲ್ಲದೆ ಸಾಮನ್ಯ ಓದುಗರಿಗೂ ಈ ಮಾಹಿತಿ ಉಪಯುಕ್ತವೆಂದು ಭಾವಿಸಲಾಗಿದೆ.

ಜನಸಂಖ್ಯಾ ಶಾಸ್ತ್ರದಲ್ಲಿ ವಿಶೇಷ ಪರಿಣತಿ ಹೊಂದಿರುವ ಕರ್ನಾಟಕ ಸರ್ಕಾರದ ಜನಸಂಖ್ಯಾ ಕೇಂದ್ರದ ನಿರ್ದೇಶಕರಾದ ಡಾ. ಪಿ. ಹೆಚ್. ರೆಡ್ಡಿ ಅವರಿಗೂ ಈ ಉಪಯುಕ್ತ ಮಾಹಿತಿ ಪುಸ್ತಕವನ್ನು ಮರುಮುದ್ರಣ ಮಾಡಿರುವ ಸನ್ಮಾನ್ಯ ಅಧ್ಯಕ್ಷರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರಿಗೆ ನನ್ನ ಕೃತಜ್ಞತೆಗಳು.

ಅಗತ್ಯವಿದ್ದ ಮಾಹಿತಿಯನ್ನು ನಿರಂತರವಾಗಿ ಒದಗಿಸಿಕೊಡುತ್ತಿದ್ದ ಜನಸಂಖ್ಯಾ ಕೇಂದ್ರದ ಗ್ರಂಥಪಾಲಕರಾಗಿದ್ದ ದಿ|| ಅನಂತಪದ್ಮನಾಭ ರಾವ್ ಅವರನ್ನು ಸ್ನೇಹ ಪೂರ್ವ ಸಹಕಾರವನ್ನು ಇಂದು ಸ್ಮರಿಸುತ್ತಿದ್ದೇನೆ.

ಈ ಪುಸ್ತಕ ಹೊರಬರಲು ಸಹಕರಿಸಿದ ಎಲ್ಲರಿಗೂ ನನ್ನ ವಂದನೆಗಳು.

ಪ್ರೊ. ಸಿ. ವಿ. ನಾಗರಾಜ್

ಮುನ್ನುಡಿ

೧೯೫೧ರಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಸರ್ಕಾರದ ಕಾರ್ಯಕ್ರಮವಾಗಿ ಆರಂಭ ಮಾಡಿದ ಭಾರತ ವಿಶ್ವದಲ್ಲೇ ಮೊದಲ ಸ್ಥಾನ ಪಡೆಯಿತು. ಆದರೆ ಜನಸಂಖ್ಯೆ ಹೆಚ್ಚುತ್ತಲೇ ಇರುವುದನ್ನು ಕಾಣುತ್ತಿದ್ದೇವೆ. ಜನಸಂಖ್ಯಾ ಹೆಚ್ಚಳ ೧೯೭೦ರಲ್ಲಿ ವರ್ಷಕ್ಕೆ ಶೇ ೨.೨ ಇದ್ದು ೧೯೮೦ರಲ್ಲಿ ೨.೧ಕ್ಕೆ ಇಳಿದಿದೆ. ಆದರೂ ಈ ಇಳಿಕೆಯ ಪ್ರಮಾಣ ಹೆಚ್ಚೇನಲ್ಲ. ಬಡತನ, ಮಾಲಿನ್ಯ ಪರಿಸರದ ಅಪಮೌಲ್ಯ, ಭಯಾನಕ ರೋಗವಾದ ಏಡ್ಸ್ ಮೊದಲಾದ ಸಮಸ್ಯೆಗಳಲ್ಲದೇ ಜನಸಂಖ್ಯಾ ಸಮಸ್ಯೆಯಿಂದ ಭಾರತ ಬಳಲುತ್ತಿದೆ.

ಈ ಕೈಪಿಡಿಯಲ್ಲಿ ಜನಸಂಖ್ಯಾ ವಿಷಯಗಳನ್ನು ಕುರಿತು ಬರೆಯುತ್ತಿರುವ ಕ್ರಿಯಾಶೀಲ ಬರಹಗಾರ ಶ್ರೀ ಸಿ. ವಿ. ನಾಗರಾಜ್ ಜನಸಂಖ್ಯಾ ಸಮಸ್ಯೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಕ್ಷಿಪ್ತವಾಗಿಯೇ ವಿವರಿಸಿದ್ದಾರೆ. ವಿಶ್ವ, ಭಾರತ ಮತ್ತು ಕರ್ನಾಟಕದಲ್ಲಿನ ಜನಸಂಖ್ಯಾ ಸ್ಥಿತಿಯನ್ನು ವಿವರಿಸುತ್ತಾ ಶ್ರೀ ನಾಗರಾಜ್ ಅವರು ಯೋಜಿತವಲ್ಲದ ನಗರೀಕರಣ; ಮಾಲಿನ್ಯ ಮತ್ತು ಪರಿಸರದ ಮೇಲೆ ಅದರ ಪರಿಣಾಮ; ಭಾರತ ಹಾಗೂ ಕರ್ನಾಟಕದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು; ೧೯೭೬, ೧೯೭೭ಮತ್ತು ೧೯೮೬ರ ಜನಸಂಖ್ಯಾ ನೀತಿಯ ಪ್ರಮುಖ ಅಂಶಗಳು; ಶಿಶುರಕ್ಷಣೆ ಮತ್ತು ಸುರಕ್ಷಿತ ತಾಯ್ತನ ಹಾಗೂ ಏಡ್ಸ್ ಮೊದಲಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಕಾರಣಗಳು. ಭಾರತ ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ನೀಡುತ್ತಿರುವ ಉಚಿತ ಸೇವೆಗಳು ಮುಂತಾದ ವಿವರಗಳು ಹಾಗೂ ಜನಸಂಖ್ಯಾ ನಿಯಂತ್ರಣಕ್ಕೆ ಸಬಂಧಿಸಿದ ಪರಿಹಾರ ಕ್ರಮಗಳನ್ನು ಸೂಚಿಸಿದ್ದಾರೆ.

ಈ ಕೈಪಿಡಿಯು ಜನಸಂಖ್ಯಾ ಸಮಸ್ಯೆಗೆ ಸಂಬಂಧಿಸಿದ ಕೆಲವಾರು ವಿಷಯಗಳನ್ನು ಪ್ರಸ್ತಾಪಿಸಿದರೂ ಎಲ್ಲವನ್ನೂ ಒಳಗೊಂಡಿದೆ. ಜನಸಂಖ್ಯಾ ಶಿಕ್ಷಣದ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಇದು ಉಪಯುಕ್ತ ಕೈಪಿಡಿಯಾಗಿದೆ. ಜನಸಂಖ್ಯಾ ಅಧ್ಯಯನಕ್ಕೆ ಸಂಬಂಧಿಸಿದ ಕೆಲವೇ ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾಗಿದೆ. ಈಗ ಶ್ರೀ ನಾಗರಾಜ್ ಅವರು ಸಂಕ್ಷಿಪ್ತವಾಗಿ ಎಲ್ಲಾ ಮಾಹಿತಿಯನ್ನು ಕೈಪಿಡಿಯ ರೂಪದಲ್ಲಿ ಒದಗಿಸಿರುವುದು ಸ್ತುತ್ಯಾರ್ಹ.

ಜನಸಂಖ್ಯಾ ಶಿಕ್ಷಣದ ಉಪನ್ಯಾಸಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಇದು ಉಪಯುಕ್ತ ಪುಸ್ತಕವೆಂದು ಸೂಚಿಸಬಯಸುತ್ತೇನೆ. ವಯಸ್ಕರ ಶಿಕ್ಷಣವಲ್ಲದೆ ಪ್ರೌಢರಿಗೆ ಏರ್ಪಡಿಸುವ ವಿವಿಧ ತರಬೇತಿ ಕಾರ್ಯಕ್ರಮಗಳಿಗೆ ಇದು ಉತ್ತಮ ಪರಾಮರ್ಶನ ಪುಸ್ತಿಕೆಯಾಗಿದೆ.

ಬೆಂಗಳೂರು
೪-೮-೧೯೯೩

ಡಾ|| ಪಿ.ಹೆಚ್.ರೆಡ್ಡಿ
ನಿರ್ದೇಶಕರು
ಜನಸಂಖ್ಯಾ ಕೇಂದ್ರ

ಪರಿವಿಡಿ

ಜನಸಂಖ್ಯಾ ಸ್ಫೋಟ

ಜನಸಂಖ್ಯೆ ಮಿತಿ ಇಲ್ಲದೆ ಹೆಚ್ಚುತ್ತಿರುವ ಪ್ರಕ್ರಿಯೆಯನ್ನು ತಜ್ಞರು 'ಜನಸಂಖ್ಯಾ ಸ್ಫೋಟ' ಎಂದು ಕರೆದಿದ್ದಾರೆ. ಪ್ರತಿ ನಿಮಿಷಕ್ಕೆ ಸುಮಾರು ೧೫೦ ಮಕ್ಕಳು ಜನಿಸುತ್ತಿದ್ದಾರೆ ಈ ಶತಮಾನದ ಅಂತ್ಯದ ವೇಳೆಗೆ ಜನಸಂಖ್ಯೆ ೬೦೦ ಕೋಟಿ!

ವರ್ಷ	ಜನಸಂಖ್ಯೆ	ದ್ವಿಗುಣಗೊಳ್ಳುವ ಅವಧಿ
ಕ್ರಿ.ಶ.೧೦೦೦	ಸುಮಾರು ೨೫ ಕೋಟಿ	--
೧೬೦೦	೫೦ ಕೋಟಿ	೧೬೦೦ ವರ್ಷಗಳು
೧೮೦೦	೧೦೦ ಕೋಟಿ	೨೦೦ "
೧೯೩೦	೨೦೦ ಕೋಟಿ	೧೩೦ "
೧೯೭೫	೪೦೦ ಕೋಟಿ	೪೫ "
೧೯೮೭ಜುಲೈ೧೧	೫೦೦ ಕೋಟಿ	ವಿಶ್ವಜನಸಂಖ್ಯಾ ದಿನ
೨೦೦೦	೬೦೦ ಕೋಟಿ	೩೦ ವರ್ಷಗಳು

ಕೆಲವು ಪ್ರಕ್ಷೇಪಣಾ ಲೆಕ್ಕಾಚಾರಗಳಂತೆ ವಿಶ್ವದ ಜನಸಂಖ್ಯೆ ಕ್ರಿ.ಶ.೨೦೦೦ಕ್ಕೆ ೭೦೦ ಕೋಟಿ ತಲುಪುವ ಅಂದಾಜು ಇದೆ.

ಮಾಹಿತಿ: ವಿಶ್ವಜನಸಂಖ್ಯಾ ಮಾಹಿತಿ ಕೇಂದ್ರ, ವಾಷಿಂಗ್‌ಟನ್ (೧೯೯೨) ಅಮೆರಿಕಾ

ಜನಸಂಖ್ಯೆ ದ್ವಿಗುಣಗೊಳ್ಳುವ ಕಾಲ

ಒಂದು ನಿರ್ದಿಷ್ಟ ಪ್ರದೇಶದ ಜನಸಂಖ್ಯೆ ಎಷ್ಟು ವರ್ಷಗಳಲ್ಲಿ ದ್ವಿಗುಣಗೊಳ್ಳುವುದು ಎಂಬ ಲೆಕ್ಕಾಚಾರವು ದ್ವಿಗುಣಗೊಳ್ಳುವುದನ್ನು ಸೂಚಿಸುತ್ತದೆ.

ವಿವಿಧ ಬೆಳವಣಿಗೆ ದರಗಳಲ್ಲಿ ಜನಸಂಖ್ಯೆ ದ್ವಿಗುಣಗೊಳ್ಳಲು ಹಿಡಿಯುವ ಕಾಲ.

ಬೆಳವಣಿಗೆ ದರ	ದ್ವಿಗುಣಗೊಳ್ಳುವ ಕಾಲ
೧ ವರ್ಷಕ್ಕೆ ಶೇಕಡಾ	ವರ್ಷಗಳಲ್ಲಿ
೦.೨೫	೨೭೮
೦.೫೦	೧೩೯
೧.೦೦	೭೦
೧.೫೦	೪೭
೨.೦೦	೩೫
೨.೫೦	೨೮

ಬೆಳವಣಿಗೆ ದರ ಹೆಚ್ಚಾದಂತೆ ದ್ವಿಗುಣಗೊಳ್ಳುವ ಕಾಲ ಕಡಿಮೆಯಾಗುತ್ತಾ ಇದೆ. ಭಾರತದ ಇಂದಿನ ಬೆಳವಣಿಗೆಯ ಪ್ರಕಾರ ಅಂದಾಜು ೩೦ ವರ್ಷಗಳಲ್ಲಿ ಜನಸಂಖ್ಯೆ ದ್ವಿಗುಣಗೊಳ್ಳುವುದು.

ಭಾರತದ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿ

ಭಾರತದ ಜನಸಂಖ್ಯೆ ಮೊದಲ ೨೫ ಕೋಟಿ ಮುಟ್ಟಲು ಸುಮಾರು ೫೦೦೦ ವರ್ಷಕ್ಕೂ ಹೆಚ್ಚು ಸಮಯ ಹಿಡಿಯಿತು. ಮುಂದಿನ ೨೫ ಕೋಟಿ ಹೆಚ್ಚಲು ಕೇವಲ ೭೫ ವರ್ಷ ಹಾಗೂ ನಂತರದ ೨೫ ಕೋಟಿ ಹೆಚ್ಚಲು ಕೇವಲ ೧೫ ವರ್ಷ ಹಿಡಿದಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಕ್ರಿ.ಶ. ೨೦೩೦ರ ಹೊತ್ತಿಗೆ ಭಾರತ ಚೀನಾದ ಜನಸಂಖ್ಯೆಯನ್ನು ಮೀರುತ್ತದೆ.

ಜನಗಣತಿ ವರ್ಷ	ಜನಸಂಖ್ಯೆ (ಕೋಟಿಗಳಲ್ಲಿ)	ದಶವಾರ್ಷಿಕ ಹೆಚ್ಚಳ
೧೯೦೧	೨೩.೮೯	–
೧೯೧೧	೨೫.೨೧	೫.೭೫
೧೯೨೧	೨೫.೧೩	೦.೩೧
೧೯೩೧	೨೭.೮೯	೧೧.೦೦
೧೯೪೧	೩೧.೮೬	೧೪.೨೧
೧೯೫೧	೩೬.೧೦	೧೩.೩೧
೧೯೬೧	೪೩.೯೨	೨೧.೫೧
೧೯೭೧	೫೪.೮೧	೨೪.೮೦
೧೯೮೧	೬೮.೩೮	೨೪.೬೬
೧೯೯೧	೮೪.೩೯	೨೩.೮೫

ವಿವಿಧ ರೀತಿಯ ಸಾಂಕ್ರಾಮಿಕ ಜಾಡ್ಯಗಳಿಂದ ಮರಣ ಪ್ರಮಾಣ ೧೯೧೧-೨೧ರಲ್ಲಿ ಹೆಚ್ಚು ಇದ್ದು ಜನಸಂಖ್ಯಾ ಬೆಳವಣಿಗೆ ಋಣಾತ್ಮಕ ಸ್ಥಿತಿಯಲ್ಲಿತ್ತು.

ಮಾಹಿತಿ: Census of India, paper 2, of 1991.

ಅನುಬಂಧಗಳು

ಭಾರತದಲ್ಲಿ ಜನನ ಮತ್ತು ಮರಣ ಪ್ರಮಾಣ

ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆ ಗತಿಯು ೧೯೭೧-೮೧ರ ಅವಧಿಯಲ್ಲಿದ್ದ ಶೇ ೨.೨೨ರಿಂದ ೧೯೮೧-೯೧ರಲ್ಲಿ ಶೇ ೨.೧೪ಕ್ಕೆ ಇಳಿದಿರುವುದು ಗಮನಾರ್ಹ.

ವರ್ಷ	ಜನನ ಪ್ರಮಾಣ	ಮರಣ ಪ್ರಮಾಣ	ಬೆಳವಣಿಗೆ ಪ್ರಮಾಣ
		(ಪ್ರತಿ ೧೦೦೦ ಜನಸಂಖ್ಯೆಗೆ)	
೧೯೦೧-೧೧	೪೯.೨	೪೨.೬	೬.೬
೧೧-೨೧	೪೮.೧	೪೮.೬	-೦.೫
೨೧-೩೧	೪೬.೪	೩೬.೩	೧೦.೧
೩೧-೪೧	೪೫.೨	೩೧.೨	೧೪.೦
೪೧-೫೧	೩೯.೯	೨೭.೪	೧೨.೫
೫೧-೬೧	೪೧.೭	೨೨.೮	೧೮.೯
೬೧-೭೧	೪೧.೪	೧೮.೯	೨೨.೨
೭೧-೮೧	೩೬.೦	೧೪.೮	೨೨.೨
೧೯೮೧-೯೧	೩೫.೦	೧೩.೬	೨೧.೪
		(ಪ್ರಕ್ಷೇಪಣಾ ಲೆಕ್ಕಾಚಾರ)	

ಮಾಹಿತಿ: Census of India, paper1, Final tables 1981 ಹಾಗೂ ಭಾರತ ಸರ್ಕಾರದ ಪ್ರಕಟಣೆ-ಮೇ ೧೬,೧೯೯೩ ಪಿ.ಟಿ.ಐ.

ಕ್ರಿ.ಶ. ೨೦೦೧ರ ಹೊತ್ತಿಗೆ ಎಲ್ಲರಿಗೂ ಆರೋಗ್ಯ

ಸರ್ಕಾರವು ಜನತೆಗೆ ಕುಟುಂಬ ಕಲ್ಯಾಣ ಸೇವೆಗಳು ಲಭ್ಯವಾಗಬೇಕೆಂದು ಸಾಕಷ್ಟು ಹಣ ವೆಚ್ಚಮಾಡಿದೆ. ಮೊದಲ ಯೋಜನೆಯಲ್ಲಿ ಕೇವಲ ೬.೫ ದಶಲಕ್ಷ ರೂ. ಮೀಸಲಿಟ್ಟ ಹಣ. ಆದರೆ ಅದು ಹಂತಹಂತವಾಗಿ ಹೆಚ್ಚುತ್ತಿದೆ. ಆರನೆಯ ಯೋಜನೆಯಲ್ಲಿ ೯,೮೭೧.೩ ದಶಲಕ್ಷ ರೂ. ವೆಚ್ಚ ಮಾಡಲ್ಪಟ್ಟಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೆ ವಿಶ್ವಬ್ಯಾಂಕ್ ಧನ ಸಹಾಯದೊಂದಿಗೆ ಭಾರತ ಜನಸಂಖ್ಯಾ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.

ಸೇವೆ ದೊರೆಯುವ ಕೇಂದ್ರಗಳು:

ಪ್ರಾಥಮಿಕ ಆರೋಗ್ಯ ಕೇಂದ್ರಗಳು	–	೮೦೦೦ಕ್ಕೂ ಹೆಚ್ಚು
ಪೂರಕ ಆರೋಗ್ಯ ಕೇಂದ್ರಗಳು	–	೪೦೦೦ಕ್ಕೂ ಹೆಚ್ಚು
ಗ್ರಾಮೀಣ ಯೋಜನಾ ಕೇಂದ್ರಗಳು	–	೬೦೦೦ಕ್ಕೂ ಹೆಚ್ಚು
ನಗರ ಸಮುದಾಯ ಕೇಂದ್ರಗಳು	–	೩೦೦೦ಕ್ಕೂ ಹೆಚ್ಚು
ಸಮುದಾಯ ಆರೋಗ್ಯ ಕೇಂದ್ರಗಳು	–	೬೦೦ಕ್ಕೂ ಹೆಚ್ಚು
ವೈದ್ಯಕೀಯ ಗರ್ಭನಿವಾರಣಾ ಕೇಂದ್ರಗಳು	–	೫೦೦೦ಕ್ಕೂ ಹೆಚ್ಚು

ಇಲ್ಲಿ ಸೇವೆ ಸಲ್ಲಿಸುವ ಸಾಂಪ್ರದಾಯಿಕ ತರಬೇತಿ ಪಡೆದ ಸೂಲಗಿತ್ತಿಯರು ೫ ಲಕ್ಷ. ಸಮುದಾಯ ಆರೋಗ್ಯ ಮಾರ್ಗದರ್ಶಿಗಳು ೪ ಲಕ್ಷ. ಖಾಯಂ ನೌಕರರು ಸರಾಸರಿ ೧ ಲಕ್ಷ. ಮತ್ತು ಅನೇಕ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು ಸರ್ಕಾರದ ಈ ಬೃಹತ್ ಕಾರ್ಯದಲ್ಲಿ ಭಾಗಿಯಾಗಿದ್ದಾರೆ.

ಒಂದು ಅಂದಾಜಿನಂತೆ ಪ್ರತಿಶತ ೩೦ ಗುರಿಸಾಧನೆ ಆಗಿದೆ. ಎಲ್ಲರ ಶ್ರಮ ಅಗತ್ಯ. ಆಗಲೇ ಪ್ರತಿಶತ ೧೦೦ ಸಾಧನೆ ಸಾಧ್ಯ.

ಭಾರತ ಎದುರಿಸುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿನ ಅಂಶಗಳು.

೧. ಹಿರಿದಾದ ಜನಸಂಖ್ಯೆ.

೨. ಹೊಂದಾಣಿಕೆ ಇಲ್ಲದ ಜನಸಂಖ್ಯಾ ರಚನೆ.

೩. ಜನಸಂಖ್ಯೆ ಹಾಗೂ ಸಂಪನ್ಮೂಲಗಳ ಅನುಪಾತದಲ್ಲಿ ವ್ಯತ್ಯಯ.

೪. ನೈಸರ್ಗಿಕ ಸಂಪನ್ಮೂಲಗಳ ಕೊರತೆ.

೫. ನೂತನ ಸಂಪನ್ಮೂಲಗಳ ಕೊರತೆ.

೬. ಔದ್ಯೋಗೀಕರಣ ಮತ್ತು ಆರ್ಥಿಕ ಬೆಳವಣಿಗೆಯ ಮುನ್ನಡೆಯಲ್ಲಿ ಮಂದಗತಿ.

೭. ಅತಿ ಕಡಿಮೆ ಉಳಿತಾಯ.

೮. ಮಾನವ ಶಕ್ತಿಯ ಅಪೂರ್ಣ ಉಪಯೋಗ.

೯. ಅನಕ್ಷರತೆ, ನಿರುದ್ಯೋಗ ಹಾಗೂ ಬಡತನ.

೧೦. ನೈಸರ್ಗಿಕ ಅಸಮತೋಲನ.

ಜನನ ನಿಯಂತ್ರಣ ವಿಧಾನಗಳು

ತಾತ್ಕಾಲಿಕ ವಿಧಾನ:

ತಾತ್ಕಾಲಿಕವಾಗಿ ಗರ್ಭಧಾರಣೆ ತಡೆಗಟ್ಟಲು ನೈಸರ್ಗಿಕ, ರಾಸಾಯನಿಕ ಮತ್ತು ತಾಂತ್ರಿಕ ವಿಧಾನಗಳು ಇವೆ. ಇವುಗಳ ಸಹಾಯದಿಂದ ಇಚ್ಛಿಸಿದಷ್ಟು ಕಾಲ ಗರ್ಭಧಾರಣೆ ಮುಂದೂಡಬಹುದು. ಅವುಗಳ ಉಪಯೋಗ ನಿಲ್ಲಿಸಿದಾಗ ಗರ್ಭಧಾರಣೆ ಸಾಧ್ಯ.

ನೈಸರ್ಗಿಕ ವಿಧಾನಗಳು: ಬ್ರಹ್ಮಚರ್ಯ, ದಾಂಪತ್ಯ ಜೀವನ ಸಾಗಿಸದಿರುವುದು, ಸುರಕ್ಷಾ ಕಾಲ ಪದ್ಧತಿ, ಅಪೂರ್ಣ ಸಂಭೋಗ.....

ವೈದ್ಯಕೀಯ ವಿಧಾನಗಳು: ಪುರುಷರಿಗೆ ನಿರೋಧ್ ಬಳಕೆ, ಸ್ತ್ರೀಯರಿಗೆ ಡಯಾಫ್ರಂ, ಜೆಲ್ಲಿ/ಮುಲಾಮು, ನೊರೆ ಗುಳಿಗೆ, ವಂಕಿ, ವೈದ್ಯಕೀಯ ಗರ್ಭನಿವಾರಕ.....

ಶಾಶ್ವತ ವಿಧಾನ:

ಪುರುಷರಿಗೆ 'ವ್ಯಾಸೆಕ್ಟಮಿ' ಶಸ್ತ್ರಚಿಕಿತ್ಸೆ ಮತ್ತು ಸ್ತ್ರೀಯರಿಗೆ 'ಟ್ಯೂಬೆಕ್ಟಮಿ' ಅಥವಾ 'ಲೆಪ್ರೋಸ್ಕೋಪಿ' ವಿಧಾನಗಳು (ಉದರ ದರ್ಶಕ ಚಿಕಿತ್ಸೆ) ಇವೆ.

ಒಂದು ವೇಳೆ ಶಸ್ತ್ರಚಿಕಿತ್ಸೆಯ ನಂತರ ಮಕ್ಕಳನ್ನು ಪಡೆಯಲು ಬಯಸಿದವರಿದ್ದರೆ ಮರು ಶಸ್ತ್ರಚಿಕಿತ್ಸಾ ವಿಧಾನವೂ ಇದೆ.

ಸಾಮಾನ್ಯವಾಗಿ ಎಲ್ಲ ಕುಟುಂಬ ಯೋಜನಾ ಸೇವೆಗಳು ಉಚಿತ.

ಭಾರತದ ಜನಸಂಖ್ಯಾ ರಚನೆ

(ವಯಸ್ಸು ಮತ್ತು ಸ್ತ್ರೀ ಪುರುಷರು-ಪ್ರತಿಶತ)

ಜನಗಣತಿ	೦-೧೪ ವರ್ಷಗಳು		೧೫-೫೪ ವರ್ಷಗಳು		೫೫ ವರ್ಷಕ್ಕಿಂತ ಹೆಚ್ಚು	
ವರ್ಷ	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
೧೯೦೧	೩೮.೬	೩೭.೪	೫೪.೯	೫೫.೨	೬.೩	೭.೫
೧೧	೩೮.೨	೩೭.೫	೫೫.೧	೫೫.೨	೬.೬	೭.೨
೨೧	೩೮.೮	೩೮.೪	೫೪.೨	೫೪.೧	೬.೯	೭.೪
೩೧	೩೮.೫	೩೮.೪	೫೪.೩	೫೪.೧	೭.೦	೭.೪
೪೧	೩೯.೨	೩೯.೦	೫೨.೯	೫೫.೯	೭.೮	೮.೦
೫೧	೩೮.೨	೩೮.೬	೫೩.೮	೫೩.೨	೭.೯	೮.೧
೬೧	೪೦.೯	೪೧.೧	೫೧.೨	೫೦.೯	೭.೮	೭.೯
೭೧	೪೧.೮	೪೨.೨	೫೨.೧	೫೧.೮	೫.೯	೫.೯
೮೧	೪೨.೦	೪೨.೮	೫೧.೯	೫೧.೬	೬.೧	೫.೭
೯೧	———	———	——— ಲಭ್ಯವಿಲ್ಲ ———	———	———	———

೦-೧೪ ವಯೋಮಾನದ ಗುಂಪಿನಲ್ಲಿ ಏರಿಕೆಯಾಗುತ್ತಿರುವುದನ್ನು ಗಮನಿಸಬೇಕು.

ಮಾಹಿತಿ: State Institute of Education, Pune 1981.

ಕುಟುಂಬ ಕಲ್ಯಾಣದ ಪರಿಕಲ್ಪನೆ

ಕುಟುಂಬ ಕಲ್ಯಾಣವೆಂದರೆ -

- ಚಿಕ್ಕ ಕುಟುಂಬದ ಮಾದರಿ.
- ಉತ್ತಮ ಹಾಗೂ ಪೌಷ್ಟಿಕ ಆಹಾರ.
- ಸಾಕಷ್ಟು ಬಟ್ಟೆ- ಬರೆಗಳು.
- ಸೂಕ್ತವಾದ ವಸತಿ ಸೌಕರ್ಯ.
- ವೈದ್ಯಕೀಯ ಹಾಗೂ ನಿರ್ಮಲೀಕರಣ ಸೇವೆ.
- ಸೂಕ್ತ ಶಿಕ್ಷಣ.
- ಅಪೇಕ್ಷಿತ ಮನರಂಜನೆ.
- ಸಾಮಾಜಿಕ ಭದ್ರತೆ.
- ತಾಯಿ ಹಾಗೂ ಶಿಶುವಿನ ಆರೋಗ್ಯ ರಕ್ಷಣೆ.
- ಸ್ತ್ರೀ-ಪುರುಷರ ಸಮಾನತೆ............ ಇತ್ಯಾದಿ.

ಭಾರತದಲ್ಲಿ ಆಯುರ್ಮಾನ ಸ್ಥಿತಿ

ಭಾರತದಲ್ಲಿ ಜನಿಸಿದ ವ್ಯಕ್ತಿ ಸರಾಸರಿ ಎಷ್ಟು ವರ್ಷ ಅಲ್ಲಿ ಬದುಕಬಲ್ಲನು ಎಂಬ ಸಂಖ್ಯೆ ನಮ್ಮ ದೇಶದ ಆಯುರ್ಮಾನ (ಆಯುಃ ಪರಿಮಾಣ)ವನ್ನು ಸೂಚಿಸುತ್ತದೆ. ೧೯೯೩ ಯುನಿಸೆಫ್ ವರದಿಯಂತೆ ವಿಶ್ವದಲ್ಲೇ ಅತಿ ಹೆಚ್ಚು ಆಯುರ್ಮಾನ ಹೊಂದಿರುವ ದೇಶ ಜಪಾನ್. ಅಲ್ಲಿನ ಆಯುರ್ಮಾನ ಸರಾಸರಿ ೭೯ ವರ್ಷಗಳು.

ಜನಗಣತಿ ವರ್ಷ	ಆಯುರ್ಮಾನ (ವರ್ಷಗಳಲ್ಲಿ)	
	ಗಂಡು	ಹೆಣ್ಣು
೧೯೦೧	೨೨.೬	೨೩.೩
೧೯೧೧	೧೯.೪	೨೦.೯
೧೯೨೧	೨೬.೯	೨೬.೬
೧೯೩೧	೩೨.೧	೩೧.೪
೧೯೪೧	೩೨.೪	೩೧.೭
೧೯೫೧	೪೧.೯	೪೦.೬
೧೯೬೧	೪೬.೪	೪೪.೭
೧೯೭೧	೫೨.೬	೫೧.೬
೧೯೮೧	೫೩.೯	೫೩.೦
೧೯೯೧	೫೫.೬	೫೬.೪
	(ಪ್ರಕ್ಷೇಪಣಾ ಸಂಖ್ಯೆಗಳು)	

ಮಾಹಿತಿ: Census of India, paper 2, 1981.

ಜನಸಂಖ್ಯಾ ನಿಯಂತ್ರಣಕ್ಕೆ ಇನ್ನೊಂದು ದಾರಿ

ವಿವಾಹಿತ ದಂಪತಿಗಳು ಯೋಜಿತ ಕುಟುಂಬ ಹೊಂದಲು ಸಾಧ್ಯವಾಗುವಂತೆ ಸೂಕ್ತ ಮುಂಜಾಗರೂಕತೆಯಿಂದ ಗರ್ಭಧಾರಣೆಯಾಗದಂತೆ ತಮ್ಮ ದಾಂಪತ್ಯ ಜೀವನ ಸಾಗಿಸುವುದು.

ಕುಟುಂಬ ಯೋಜನೆ ಏಕೆ?

ಅ. ಯಾವಾಗ ಮತ್ತು ಎಷ್ಟು ಮಕ್ಕಳನ್ನು ಪಡೆಯಬಹುದು ಎಂಬ ಜ್ಞಾನ ಹೊಂದಲು.

(ಸಾಧ್ಯವಿದ್ದಷ್ಟು ಒಂದೇ ಮಗುವಿನ ಕುಟುಂಬ ಹೊಂದುವ ಬಗ್ಗೆ ವಿಚಾರ ಮಾಡಲು)

ಆ. ತಾಯಿ ಹಾಗೂ ಮಕ್ಕಳ ಆರೋಗ್ಯ ಕಾಪಾಡಲು.

ಇ. ಯಾವುದೇ ಅಡೆ-ತಡೆ ಇಲ್ಲದೇ ಅಥವಾ ಹೆದರಿಕೆ ಇಲ್ಲದೆ ದಾಂಪತ್ಯ ಜೀವನ ಸಾಗಿಸುವುದು.

ಅನುಕೂಲತೆಗಳು:

೧. ತಾಯಿಯ ಆರೋಗ್ಯದೊಂದಿಗೆ ಶಿಶುವಿನ ಆರೋಗ್ಯ ರಕ್ಷಣೆ.

೨. ಚಿಕ್ಕ ಮತ್ತು ಚೊಕ್ಕನಾದ ಕುಟುಂಬವು ಹೆಚ್ಚು ಸುಖೀ ಕುಟುಂಬ.

೩. ಕುಟುಂಬದಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಲು ಸ್ತ್ರೀಯೂ ಸಹ ಉದ್ಯೋಗ ಹೊಂದಲು ಸಾಧ್ಯ.

೪. ಜೀವನ ಮಟ್ಟದಲ್ಲಿ ಏರಿಕೆ.

೫. ಮನೆಯಲ್ಲಿ ಮನರಂಜನಾ ಅವಕಾಶಗಳಲ್ಲಿ ಹೆಚ್ಚಳ........ ಇತ್ಯಾದಿ.

ಭಾರತದಲ್ಲಿ ಶಿಶು ಮರಣ ಪ್ರಮಾಣ

ಪ್ರತಿ ೧೦೦೦ ಜನನಗಳಿಗೆ, ಶಿಶು ಒಂದು ವರ್ಷ ತುಂಬುವಷ್ಟರೊಳಗೆ ಮರಣ ಹೊಂದಿದರೆ ಮರಣ ಹೊಂದಿದ ಮಕ್ಕಳ ಸಂಖ್ಯೆ ಶಿಶು ಮರಣ ಪ್ರಮಾಣ ಸೂಚಿಸುತ್ತದೆ.

೧೯೯೩ರ ಯೂನಿಸೆಫ್ ವರದಿಯ ಪ್ರಕಾರ, ವಿಶ್ವದಲ್ಲಿ ಒಂದು ವರ್ಷ ತುಂಬುವಷ್ಟರಲ್ಲೇ ಮರಣ ಹೊಂದುವ ಮಕ್ಕಳ ಸಂಖ್ಯೆಯ ವಿವರ:

ವರ್ಷ	ಶಿಶು ಮರಣ ಪ್ರಮಾಣ (ಪ್ರತಿ ೧೦೦೦ ಜನನಗಳಿಗೆ)
೧೯೦೧	೨೮೪
೧೧	೨೦೫
೨೧	೧೯೮
೩೧	೧೭೯
೪೧	೧೫೮
೫೧	೧೩೩
೬೧	೧೦೯
೭೧	೧೧೩
೮೧	೧೨೭
೧೯೯೧	೯೪(ಪ್ರಕ್ಷೇಪಣ ಸಂಖ್ಯೆ)

ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು: ಜಪಾನ್: ೧೦೦೦ಕ್ಕೆ ಐದು ಮಕ್ಕಳು. ಸ್ವೀಡನ್: ೧೦೦೦ಕ್ಕೆ ನಾಲ್ಕು ಮಕ್ಕಳು.

ಮಾಹಿತಿ: (Census of India, paper 2, 1981,1993,UNICEF. 'The State of World's Children.

ರಾಷ್ಟ್ರೀಯ ಶಾಲಾ ಆರೋಗ್ಯ ಕಾರ್ಯಕ್ರಮ

ಮಕ್ಕಳು ನಿಶ್ಯಕ್ತಿ ಮತ್ತು ಕಾಯಿಲೆಗಳಿಂದ ಬಳಲುತ್ತಿದ್ದರೆ ಕಲಿಯಲು ಸಾಧ್ಯವಿಲ್ಲ, ಓದಲು ಬರೆಯಲು ಆಸಕ್ತಿ ಕಡಿಮೆ.ಮಕ್ಕಳಿಗೆ ಶಾಲಾ ಸನ್ನಿವೇಶದಲ್ಲಿ ಅಂಟುರೋಗಗಳು ಬರುವುದು ಸಹಜ. ಮಕ್ಕಳ ಆರೋಗ್ಯ ರಕ್ಷಣೆಗೆಂದು ಶಾಲಾ ಆರೋಗ್ಯ ತಪಾಸಣಾ ಕಾರ್ಯಕ್ರಮವಿದೆ.

ಆಗಾಗ್ಗೆ ಸ್ವಯಂ ಸೇವಾ ಸಂಸ್ಥೆಗಳೂ ಸಹ ಶಾಲೆಗಳಲ್ಲಿ ಕಣ್ಣು ತಪಾಸಣಾ ಕಾರ್ಯಕ್ರಮ, ಸಾಮಾನ್ಯ ಆರೋಗ್ಯ ತಪಾಸಣಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುತ್ತವೆ.

ಶಿಕ್ಷಕರು ಈ ಕಾರ್ಯಕ್ರಮಗಳಲ್ಲಿ ಆಸಕ್ತಿವಹಿಂಸಬೇಕು. ಮಕ್ಕಳ ಕುಂದುಕೊರತೆಗಳನ್ನು ತಜ್ಞ ವೈದ್ಯರ ಗಮನಕ್ಕೆ ತರಬೇಕು. ಅವರು ನೀಡಿದ ಪರಿಹಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾಲಕ- ಪೋಷಕರಿಗೆ ಮಾರ್ಗದರ್ಶಕರಾಗಬೇಕು.

ಜನಸಂಖ್ಯಾ ಶಿಕ್ಷಣದ ಅವಶ್ಯಕತೆ

ಸಾಮಾಜಿಕ ಅಭಿವೃದ್ಧಿ ಮತ್ತು ಮಾರ್ಪಾಡನ್ನು ಉಂಟು ಮಾಡಲು ಶಿಕ್ಷಣ ಮೂಲಭೂತವಾದದ್ದು. ಜನಸಂಖ್ಯಾ ಶಿಕ್ಷಣವು ಇಂದಿನ ಪರಿಸ್ಥಿತಿಯಲ್ಲಿ ಅತಿ ಮುಖ್ಯವಾದದ್ದು. ಏಕೆಂದರೆ

- ಜನಸಂಖ್ಯಾ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಜನಸಂಖ್ಯಾ ಸಮಸ್ಯೆಗಳನ್ನು ಅರಿತುಕೊಳ್ಳಲು ಸಹಕರಿಸುವುದು.
- ಜನಸಂಖ್ಯಾ ಸಮಸ್ಯೆಯ ಬಗ್ಗೆ ವಿಚಾರಯುತವಾದ ಮನೋಭಾವ ಮತ್ತು ಸೂಕ್ತ ವರ್ತನೆ ಹೊಂದಲು ಚಿಂತನೆ ಉಂಟುಮಾಡುವುದು.
- ವೈಯಕ್ತಿಕ, ಕೌಟುಂಬಿಕ ಸಮುದಾಯಿಕ ರಾಷ್ಟ್ರ ಮತ್ತು ಜಾಗತಿಕ ಹಂತದಲ್ಲಿ ಉತ್ತಮ ಜೀವನ ಗುಣಮಟ್ಟ ಹೊಂದಲು ಪ್ರಚೋದಿಸುವುದು.
- ಎಲ್ಲ ವಯಸ್ಸಿನ ಎಲ್ಲ ಮನೋಧರ್ಮದವರಿಗೂ ಒಪ್ಪಿಗೆಯಾಗುವಂತಹುದು.

"ಜನಸಂಖ್ಯಾ ಹೆಚ್ಚಳದಿಂದ ಉಂಟಾಗುವ ಸಮಸ್ಯೆಯನ್ನು ಸರಿಪಡಿಸಿಕೊಳ್ಳಲು ಅವಶ್ಯಕವಾದ ಮನೋಭೂಮಿಕೆ ಒದಗಿಸುವ ಶಿಕ್ಷಣ, ಕುಟುಂಬ, ಸಮಾಜ, ರಾಷ್ಟ್ರ ಹಾಗೂ ವೈಯಕ್ತಿಕ ಬೆಳವಣಿಗೆಗೆ ಜನಸಂಖ್ಯೆಯ ಪಾತ್ರದ ಬಗ್ಗೆ ಅರಿವು ಮೂಡಿಸಿ ವ್ಯಕ್ತಿಗಳ ಹಾಗೂ ಸಮುದಾಯಗಳ ಪಾತ್ರ ತಿಳಿಸಿ ಕೊಡುವ ಶೈಕ್ಷಣಿಕ ಕಾರ್ಯಕ್ರಮ ಜನಸಂಖ್ಯಾ ಶಿಕ್ಷಣ".

ಯುನೆಸ್ಕೋ ೧೯೭೬

ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಶಿಶು ಮರಣ ಪ್ರಮಾಣ

(ಪ್ರತಿ ೧೦೦೦ ಜನನಗಳಿಗೆ)

ದೇಶ	ವರ್ಷ					
	೧೯೦೧-೦೫	೧೯೪೭-೫೧	೧೯೬೦	೧೯೭೦	೧೯೮೩	೧೯೯೩
ಇಂಗ್ಲೆಂಡ್	೧೩೮	೩೫	೨೧.೮	೧೮	೧೨.೧	೦೭
ನ್ಯೂಜಿಲೆಂಡ್	೭೫	೨೩	೨೨.೬	೧೭	೧೧.೭	೦೮
ಸ್ವಿಟ್ಸರ್‌ಲೆಂಡ್	೧೩೪	೩೪	೨೨.೫	೧೩	೯.೧	೦೭
ಫ್ರಾನ್ಸ್	೧೩೯	೪೫	೨೯.೩	೧೬	೯.೬	೦೭
ಅಮೆರಿಕಾ	೭೪	೩೧	೨೫.೬	೨೦	೧೧.೪	೦೯
ಬೆಲ್ಜಿಯಂ	೧೪೮	೬೧	೧೬.೫	೧೩	೧೧.೭	೦೮
ಸ್ವೀಡನ್	೯೧	೨೨	೧೬.೬	೧೩	೭.೦	೦೪
ಜಪಾನ್	೧೨೪ (೧೯೩೦-೩೧)	೩೮	೨೭.೭	೨೧	೧೦.೪	೦೫
ಭಾರತ	೨೧೫	೧೩೬	೧೦೮.೦	೧೧೩.೦	೧೨೨.೦	೮೪

೧೯೯೩ರಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ-೧೦೦೦ಕ್ಕೆ ೬೭

ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು - ೧೦೦೦ಕ್ಕೆ ೧೩

ಮಾಹಿತಿ: State Institute of Education, Pune.

ಉತ್ತಮ ಜೀವನ ಗುಣಮಟ್ಟ ಹೊಂದಲು ಇರುವ ಅಡಚಣೆ

ಉತ್ತಮ ಜೀವನ ಗುಣಮಟ್ಟ ಹೊಂದಲು ಇರುವ ಮುಖ್ಯ ಅಡಚಣೆಗಳು ಅನೇಕ. ಅವುಗಳಲ್ಲಿ ಪ್ರಮುಖವಾಗಿರುವುದು - ಹೆಚ್ಚುತ್ತಿರುವ ಜನಸಂಖ್ಯೆ. ಇದರಿಂದಾಗಿ ಉಂಟಾಗುತ್ತಿರುವ ಕೊರತೆಗಳು:

- ಆಹಾರ.
- ಬಟ್ಟೆ.
- ಶೈಕ್ಷಣಿಕ ಸೌಲಭ್ಯಗಳು.
- ಸಂಪರ್ಕ ಸಾಧನಗಳು.
- ಕುಡಿಯುವ ಶುದ್ಧ ನೀರು.
- ವಸತಿ.
- ವೈದ್ಯಕೀಯ ಸೌಲಭ್ಯಗಳು.
- ಮನರಂಜನಾ ಸಾಧನಗಳು.
- ಕಾನೂನು ಹಾಗೂ ರಕ್ಷಣೆ.
- ಉದ್ಯೋಗಗಳು.

ಈ ಪಟ್ಟಿಗೆ ಕೊನೆ ಎಲ್ಲಿದೆ?

ಶಿಶು ರಕ್ಷಣೆಗೆ ಸಮಗ್ರ ಕಾರ್ಯಕ್ರಮ

೧. ಬೆಳವಣಿಗೆ ಹಾಗೂ ಅಭಿವೃದ್ಧಿ (ದೈಹಿಕ ಹಾಗೂ ಮಾನಸಿಕ) ಕಡೆಗೆ ಗಮನ.

೨. ಜೀವ ಜಲದಿಂದ ರಕ್ಷಣೆ (ಅತಿ ಬೇಧಿ/ ಅತಿಸಾರದಿಂದ ರಕ್ಷಿಸಲು ಕೊಡುವ ದ್ರವ ಜೀವ ಜಲ)

೩. ತಾಯಿಯ ಎದೆಹಾಲು, ಮಗು ಜನಿಸಿದ ದಿನದಿಂದಲೆ ಕುಡಿಸುವುದು (ನೈಸರ್ಗಿಕ ರೋಗ ನಿರೋಧಕ ಶಕ್ತಿ ಮಗುವಿಗೆ ಲಭ್ಯವಾಗುವುದು).

೪. ರೋಗ ನಿರೋಧಕ ಲಸಿಕೆಗಳನ್ನು ಕೊಡಿಸುವುದು. (ಬಿ.ಸಿ.ಜಿ, ಡಿ.ಪಿ.ಟಿ, ಪೋಲಿಯೋ, ಟೈಫಾಯಿಡ್ ಲಸಿಕೆ... ಇತ್ಯಾದಿ ಕೊಡಿಸುವುದು).

೫. ಪೂರಕ ಆಹಾರ ಮಕ್ಕಳಿಗೆ ಕೊಡುವುದು. (ರಾಗಿ ಹುರಿಹಿಟ್ಟು, ಬೇಯಿಸಿದ ಸೊಪ್ಪಿನ ರಸ, ತರಕಾರಿ ರಸ...... ಇತ್ಯಾದಿ).

೬. ಸ್ತ್ರೀಯರಿಗೆ ಶಿಕ್ಷಣ ನೀಡುವುದು. (ಓದು- ಬರಹ ಅಷ್ಟೇ ಅಲ್ಲದೆ ಶಿಶು ಸಂರಕ್ಷಣೆಯ ಬಗ್ಗೆ ತಿಳುವಳಿಕೆ).

೭. ಕುಟುಂಬ ಯೋಜನಾ ವಿಧಾನಗಳ ತಿಳುವಳಿಕೆ (ಮತ್ತೆ ಮಕ್ಕಳಾಗದಂತೆ ನಿರೋಧಗಳ ಬಳಕೆ ಬಗ್ಗೆ ವಿವರ).

ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟದ ಏರಿಕೆಗೆ ಅಡಚಣೆ

ಜನಸಂಖ್ಯಾ ಹೆಚ್ಚಳ ಮಿತಿ ಇಲ್ಲದೆ ಹೋದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಟ್ಟ ಇಳಿಮುಖವಾಗುವುದು.

೧. ಸಮಾಜದಲ್ಲಿನ ಸಾಂಸ್ಕೃತಿಕ ಮೌಲ್ಯಗಳು ಕ್ರಮೇಣ ಹಿಂದಕ್ಕೆ ಸರಿಯುವುವು.

೨. ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲಾಗದ ಜನತೆಯ ವರ್ತನೆ ಸಮಾಜಮನ್ನಿತ ರೀತಿಯಿಂದ ದೂರ ಸರಿಯಬಹುದು.

೩. ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬದಿಗೊತ್ತಿ ಜನರು ತಮ್ಮ ಗುರಿಸಾಧನೆಗಳನ್ನು ಪ್ರಯತ್ನಿಸುವರು.

೪. ಒಬ್ಬ ವ್ಯಕ್ತಿಯ ವರ್ತನೆಯನ್ನು ಕಂಡ ಇನ್ನೊಬ್ಬ ವ್ಯಕ್ತಿ ಅತೃಪ್ತಿ ಅಸೂಯೆ ಹಾಗೂ ಅಶಾಂತಿಯಿಂದ ವರ್ತಿಸುವನು.

೫. ಈ ಕಾರಣಗಳಿಂದ ಸಮಾಜದಲ್ಲಿ ಅನಿಶ್ಚಿತತೆ ಮತ್ತು ಅಭದ್ರತೆ ಉಂಟಾಗಿ ಸಮಾಜ ಘಾತಕ ಕೃತ್ಯಗಳು ಹೆಚ್ಚುವುವು.

ಅತಿ ಭೇದಿ/ ಅತಿಸಾರದ ವಿರುದ್ಧ ರಕ್ಷಣೆ
(ವೈದ್ಯಕೀಯ ಮಾರ್ಗ)

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ:

ಮೂರು ಅಥವಾ ನಾಲ್ಕು ಬಾರಿ ಮಗು ನೀರಿನಂತೆ ಭೇದಿ ಮಾಡಿಕೊಳ್ಳುತ್ತಿದ್ದರೆ ಹಾಗೂ ವಾಂತಿ ಮಾಡಿಕೊಳ್ಳುತ್ತಿದ್ದರೆ ಅದು ಅತಿ ಭೇದಿಯ ಲಕ್ಷಣ.

ಹಂತಗಳು:

ಅ) ಅತಿಭೇದಿ ಆದರೆ ನಿರ್ಜಲೀಕರಣ ಸ್ಥಿತಿ ಇಲ್ಲ (DND) ಕಣ್ಣುಗಳಲ್ಲಿ ನೀರು ತುಂಬಿರುವುದು. ಒಣಗದಿರುವ ನಾಲಿಗೆ.

ಆ) ಅತಿಭೇದಿ. ಆದರೆ ಸ್ವಲ್ಪ ನಿರ್ಜಲೀಕರಣ ಸ್ಥಿತಿ (DSD) ಕಣ್ಣುಗಳಲ್ಲಿ ನೀರಿಲ್ಲ, ನಾಲಿಗೆ ಸ್ವಲ್ಪ ಒಣಗಿದೆ.

ಇ) ಅತಿಭೇದಿ ಮತ್ತು ತೀವ್ರ ನಿರ್ಜಲೀಕರಣ ಸ್ಥಿತಿ (DSrD).


ನೆತ್ತಿಬಾಯಿ ಒಳಗೆ ಹೋಗಿರುವುದು, ನಾಲಿಗೆ ಪೂರ್ತಿ ಒಣಗಿದೆ, ಕಣ್ಣು ಗುಳಿ ಬಿದ್ದಿದೆ, ಹೊಕ್ಕುಳ ಬಳಿ ಗುಳಿ ಬಿದ್ದಿರುವುದು, ಮೂತ್ರ ವಿಸರ್ಜನೆ ಕಡಿಮೆ ಯಾಗಿರುವುದು....... ಇತ್ಯಾದಿ.

ರಕ್ಷಣೆ:

ಅತಿಭೇದಿ ಇದ್ದಾಗ ಮಗು ತನ್ನ ದೇಹದಿಂದ ನೀರು ಲವಣಾಂಶ ಪೌಷ್ಟಿಕಾಂಶಗಳನ್ನು ಕಳೆದುಕೊಳ್ಳುವುದು. ಆಗ ಸತತವಾಗಿ ಮಗುವಿಗೆ ಜೀವಜಲ ಕುಡಿಸುತ್ತಿರಬೇಕು. ಅಥವಾ ಎಳನೀರು, ಸೊಪ್ಪಿನ ನೀರು, ಅಕ್ಕಿ ನೀರು, ಬೇಳೆ ನೀರು ಮುಂತಾದ ದ್ರವಗಳನ್ನು ಕುಡಿಸುತ್ತಿರಬೇಕು. ತಾಯಿಯ ಎದೆ ಹಾಲನ್ನು ಕೊಡಬಹುದು.

ಜೀವಜಲ ತಯಾರಿಕೆಯ ವಿವರಗಳನ್ನು ಆರೋಗ್ಯ ಕಾರ್ಯಕರ್ತರಿಂದ ಪಡೆಯಬಹುದು.

ಹಿರಿದಾದ ಜನಸಂಖ್ಯೆ - ಹೆಚ್ಚುತ್ತಿರುವ ಸಮಸ್ಯೆಗಳು



ಒಂದು ದೇಶದ ಸಮಸ್ಯೆಗಳು ಇಷ್ಟೇ ಅಲ್ಲ; ಇನ್ನೂ ಎಷ್ಟೋ!

ವಿವಾಹದ ಸರಾಸರಿ ವಯಸ್ಸು ಮತ್ತು ಸ್ತ್ರೀ ಪುರುಷ ಪ್ರಮಾಣ

ಭಾರತದಲ್ಲಿ ವಿವಾಹ ಅತಿ ಚಿಕ್ಕವಯಸ್ಸಿನಲ್ಲಿ ನಡೆಯುತ್ತಿದೆ. ಈ ಕಾರಣದಿಂದ ವೈವಾಹಿಕ ಜೀವನದ ಅವಧಿ ವಿಸ್ತಾರಗೊಳ್ಳುತ್ತದೆ.

ಒಂದು ಅಧ್ಯಯನ ಪ್ರಕಾರ.

ಒಬ್ಬ ಮಹಿಳೆ ೧೭ ವರ್ಷಕ್ಕೆ ವಿವಾಹವಾದರೆ, ಆಕೆ ಸರಾಸರಿ ೫.೫ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಆಕೆ ೨೧-೨೪ರ ವಯಸ್ಸಿನಲ್ಲಿ ವಿವಾಹವಾದರೆ ೩.೮ ಮಕ್ಕಳಿಗೂ ೨೫ ವರ್ಷದ ನಂತರ ಆದರೆ ೨.೩ ಮಕ್ಕಳಿಗೂ ಜನ್ಮ ನೀಡುತ್ತಾಳೆ.

ಆದ್ದರಿಂದ ವಿವಾಹದ ವಯಸ್ಸಿಗೂ ಜನನ ಪ್ರಮಾಣಕ್ಕೂ ನಿಕಟ ಸಂಬಂಧವಿದೆ.

ವಿವಾಹದ ವಯಸ್ಸು: (ವರ್ಷಗಳಲ್ಲಿ)	೧೫-೧೯	೨೦-೨೪	೨೫-೨೯	೩೦-೩೪	೩೫-೩೯	೪೦-೪೪
ಜನನ ಪ್ರಮಾಣ: (ಪ್ರತಿ ೧೦೦೦ಕ್ಕೆ)	೨೨೮	೩೧೫	೨೬೪	೨೨೫	೧೬೧	೯೫

ಅಲ್ಲದೆ ಸ್ತ್ರೀ ಪುರುಷ ಪ್ರಮಾಣವನ್ನು ಗಮನಿಸಿದಾಗ ಸ್ತ್ರೀಯರ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಸ್ತ್ರೀ ಭ್ರೂಣ ಹತ್ಯೆಯೂ ಒಂದಾಗಿದೆ. ಕಿರಿಯ ವಯಸ್ಸಿನಲ್ಲಿ ಗರ್ಭಧಾರಣೆಯಾದಲ್ಲಿ ಹೆರಿಗೆ ಸಂದರ್ಭದ ಸಾವಿನ ಸಾಧ್ಯತೆ ಹೆಚ್ಚು.

ಮಾಹಿತಿ: ಜನಸಂಖ್ಯಾ ಶಿಕ್ಷಣ ಉಪನ್ಯಾಸ ಕೈಪಿಡಿ. ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು.

ಜನಸಂಖ್ಯೆ ಮಿತಿ ಮೀರಿದರೆ ಕೊರತೆಗೆ ಆಹ್ವಾನ

ವಿವಾಹ ಕಾಲದಲ್ಲಿ ಸ್ತ್ರೀ-ಪುರುಷರ ವಯಸ್ಸು

ಜನಗಣತಿ ವರ್ಷ	ವಿವಾಹದ ವಯಸ್ಸು ಪು	ಸ್ತ್ರೀ (ವರ್ಷಗಳಲ್ಲಿ)
೧೯೦೧	೨೦.೦	೧೩.೧
೧೯೧೧	೨೦.೩	೧೩.೨
೧೯೨೧	೨೦.೭	೧೩.೭
೧೯೩೧	೧೮.೬	೧೩.೭
೧೯೪೧	೧೯.೯	೧೪.೭
೧೯೫೧	೧೯.೯	೧೫.೬
೧೯೬೧	೨೧.೩	೧೫.೫
೧೯೭೧	೨೨.೭	೧೭.೨
೧೯೮೧	೨೨.೭	೧೮.೩
೧೯೯೧	೨೨.೮	೧೮.೯

ಒಂದು ದೇಶದ ಜನಸಂಖ್ಯಾ ಹೆಚ್ಚಳದ ಬಗ್ಗೆ ವಿಚಾರ ಮಾಡುವಾಗ ಸ್ತ್ರೀಯರ ವಿವಾಹದ ವಯಸ್ಸನ್ನು ಮುಖ್ಯವಾಗಿ ಪರಿಗಣಿಸಬೇಕು. ಭಾರತದಲ್ಲಿ ಕಾನೂನು ರೀತ್ಯಾ ವಿವಾಹದ ವಯಸ್ಸು ಪುರುಷರಿಗೆ ೨೧ ವರ್ಷ ಹಾಗೂ ಸ್ತ್ರೀಯರಿಗೆ ೧೮ ವರ್ಷ ಕನಿಷ್ಠ ಇರಲೇಬೇಕು. ಆದರೂ ಬಾಲ್ಯ ವಿವಾಹ ಹಿಂದಿನಿಂದಲೂ ಇದ್ದ ಕಾರಣ, ಇನ್ನೂ ಹೆಚ್ಚು ವ್ಯತ್ಯಾಸ ಕಂಡು ಬಂದಿಲ್ಲ. ಸ್ತ್ರೀ ಅನಕ್ಷರತೆಯೂ ಒಂದು ಮುಖ್ಯ ಕಾರಣ.

ಅರಣ್ಯ ಸಂಪತ್ತಿನ ಅಭಿವೃದ್ಧಿ ರಕ್ಷಣೆ ಹಾಗೂ ಪಾಲನೆ.

ದೇಶದ ಅಭಿವೃದ್ಧಿಗೆ ಅರಣ್ಯ ಸಂಪತ್ತು ಅತಿ ಮುಖ್ಯ. ನಮ್ಮ ಕಾಡುಗಳು ಒಂದು ವರ್ಷಕ್ಕೆ ೧ ದಶಲಕ್ಷ ಹೆಕ್ಟೇರುಗಳಷ್ಟು ನಾಶ ಹೊಂದುತ್ತಿವೆ. ಆದ್ದರಿಂದ, ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ.

೧. ಅರಣ್ಯ ಅಭಿವೃದ್ಧಿ ನಿಗಮಗಳ ಸ್ಥಾಪನೆ.

೨. ಕ್ಷೀಣ ಸ್ಥಿತಿಯಲ್ಲಿರುವ ಅರಣ್ಯಗಳಲ್ಲಿ ವನ ನಿರ್ಮಾಣ ಕಾರ್‍ಯ.

೩. ಸಂಶೋಧನೆಗೆ ಪ್ರೋತ್ಸಾಹ.

ಕ್ಷೇತ್ರಗಳು:

ಅ. ಅಮೂಲ್ಯ ಜೀವಿಗಳ ರಕ್ಷಣೆ ಹಾಗೂ ಪಾಲನೆ.

ಆ. ಕ್ಷಿಪ್ರಗತಿಯಲ್ಲಿ ಬೆಳೆಯುವ ಸಸ್ಯಗಳ ಅಭಿವೃದ್ಧಿ.

ಇ. ವನ್ಯಜೀವಿ ಸಂರಕ್ಷಣೆ....... ಇತ್ಯಾದಿ.

೪. ಕೈಗಾರಿಕೆ ಹಾಗೂ ವಾಣಿಜ್ಯ ಉದ್ಯಮಗಳಿಗಾಗಿ ಆರ್ಥಿಕ ಪ್ರತಿಫಲ ಪಡೆಯಲು ನೆಡುತೋಪು ಬೆಳೆಸುವುದು.

೫. ಪರವಾನಗಿ ಇಲ್ಲದೆ ಕಾಡು ಕಡಿಯುವವರ ವಿರುದ್ಧ ಸೂಕ್ತ ಕ್ರಮ.

೬. ವನ್ಯ ಮೃಗಗಳ ಬೇಟೆಯಾಡುವವರ ಮೇಲೆ ಕಾನೂನು ಕ್ರಮ.

೭. ಅರಣ್ಯ ಸಂಪತ್ತಿನ ಅಭಿವೃದ್ಧಿಗೆ ಸಾಕಷ್ಟು ಜಾಗವನ್ನು ಕಾದಿಟ್ಟ ಹಾಗೂ ಕಾದಿರಿಸಲ್ಪಟ್ಟ ಪ್ರದೇಶಗಳೆಂದು ಘೋಷಿಸುವುದು.

೮. ಅಭಯಾರಣ್ಯಗಳ ಸ್ಥಾಪನೆ.

ಮಹಿಳೆಯರಲ್ಲಿ ವಸ್ತಿಕುಹರದ ಮೂಳೆ ಮತ್ತು ಕೀಲುಗಳು ಗಡುಸಾಗಿ ಹೆರಿಗೆ ತ್ರಾಸದಾಯಕವಾಗುವುದು. ಅಂಥ ಮಹಿಳೆಯರಿಗೆ ಜನಿಸುವ ಮಕ್ಕಳು ಬುದ್ಧಿಮಾಂದ್ಯತೆ ಮುಂತಾದ ಸಂಜಾತ ನ್ಯೂನತೆಗಳಿಂದ ಬಳಲುವರು.

ಆದ್ದರಿಂದ ಸೂಕ್ತ ವಯಸ್ಸಿನಲ್ಲಿ ವಿವಾಹವಾಗಿ ಚಿಕ್ಕ ಕುಟುಂಬ ಪಡೆಯುವುದು ಅಪೇಕ್ಷಣೀಯ.

ರಕ್ತ ಸಂಬಂಧಿಗಳ ವಿವಾಹ - ಒಂದು ಮಾತು.

ವಂಶಪಾರಂಪರ್ಯವಾಗಿ ಕೆಲವು ಕಾಯಿಲೆಗಳು ಮುಂದುವರಿಯುವುದುಂಟು. ತಂದೆ ತಾಯಿ ಇಬ್ಬರೂ ಒಂದೇ ರೀತಿಯ ಕಾಯಿಲೆಗಳಿಂದ ಕೂಡಿದ್ದರೆ, ಅವರ ಮಕ್ಕಳಲ್ಲೂ ಅವು ಉದ್ಭವಿಸಬಹುದು. ವಿವಾಹವಾಗುವ ಸ್ತ್ರೀ ಹಾಗೂ ಪುರುಷರ ತಂದೆ-ತಾಯಿಯರ ಕೆಲವು ಕಾಯಿಲೆಗಳು ಪೀಳಿಗೆಯ ನವ ದಂಪತಿಗಳ ಮೂಲಕ ಮುಂದುವರಿಯುವ ಸಾಧ್ಯತೆಗಳೂ ಇವೆ.

ಡಯಾಬಿಟೀಸ್, ವಾತರೋಗ, ರಕ್ತದ ಒತ್ತಡ, ಮತಿವಿಕಲತೆ ಹಲವಾರು ರೋಗಗಳು ಹೀಗೆ ಮುಂದುವರಿಯುವ ಸಂಭವವಿದೆ. ತಳಿ-ಶಾಸ್ತ್ರದಂತೆ ನಮ್ಮ ಜೀವಕಣಗಳಲ್ಲಿರುವ ವರ್ಣತಂತುಗಳ ಮೂಲಕ ಮುಂದಿನ ಪೀಳಿಗೆಯವರಿಗೆ ಕಾಯಿಲೆಗಳು ಪ್ರಸಾರಗೊಳ್ಳುತ್ತವೆ ಎಂದು ತಿಳಿಯಲಾಗಿದೆ.

ವಿವಾಹಕ್ಕೆ ಮೊದಲು ವಧೂವರರಾಗುವವರ ಜಾತಕಗಳನ್ನು ಹೊಂದಿಸಿ ನೋಡುವುದಕ್ಕೆ ಮೊದಲು ಅವರ ವಂಶಗಳಲ್ಲಿನ ಕಾಯಿಲೆಗಳ ಬಗ್ಗೆ ಹಾಗೂ ರಕ್ತದ ಗುಂಪುಗಳ ಬಗ್ಗೆ ಹೊಂದಿಕೆ- ಇವುಗಳನ್ನು ಕುರಿತು ವಿಚಾರ ಮಾಡುವುದು ಮುಖ್ಯ. ಆರ್.ಹೆಚ್. ರಕ್ತದ ಗುಂಪು ಪತಿಯದಾಗಿದ್ದು ಪತ್ನಿಯಲ್ಲಿ ಇಲ್ಲದಿದ್ದಲ್ಲಿ ಆ ವ್ಯಕ್ತಿಗಳ ಸಂಗಮದಿಂದ ಉಂಟಾಗುವ ಭ್ರೂಣ ಆರ್.ಹೆಚ್. ಅಂಶ ಪಡೆದುಕೊಂಡರೆ, ತಾಯಿ ಹಾಗೂ ಮಗು ಇಬ್ಬರಿಗೂ ಸಮಸ್ಯೆಯೆ.

ಜಾತಕ ಹೊಂದಾಣಿಕೆಗಿಂತ ರಕ್ತ ಹೊಂದಾಣಿಕೆ ವಿವಾಹದ ಮುನ್ನ ಸೂಕ್ತ.

ರಾಷ್ಟ್ರೀಯ ಮತ್ತು ತಲಾ ವರಮಾನದಲ್ಲಿ ಏರಿಕೆ

ರಾಷ್ಟ್ರೀಯ ವರಮಾನವೆಂದರೆ ರಾಷ್ಟ್ರದ ಎಲ್ಲ ರೀತಿಯ ಸಂಪನ್ಮೂಲಗಳಿಂದ ದೊರೆಯುವ ಹಣ ಹಾಗೂ ಸೌಲಭ್ಯಗಳು. ಜನಸಂಖ್ಯೆಯಿಂದ ಈ ಸಂಖ್ಯೆಯನ್ನು ಭಾಗವಹಿಸಿದಾಗ ಪ್ರತಿ ವ್ಯಕ್ತಿಯ ವರಮಾನ ದೊರೆಯುವುದು. ಪ್ರತಿ ಹಂತದಲ್ಲೂ ಈ ವರಮಾನದಲ್ಲಿ ಏರಿಕೆ ಇದೆ. ಆದರೂ ಭಾರತದ ಈ ಸಂಖ್ಯೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅತಿ ಕಡಿಮೆ.

ವರಮಾನ	ವರ್ಷಗಳು					
	೧೯೭೪-೭೫	೧೯೭೫-೭೬	೧೯೭೬-೭೭	೧೯೭೭-೭೮	೧೯೭೮-೭೯	೧೯೭೯-೮೦
ರಾಷ್ಟ್ರೀಯ ವರಮಾನ ಕೋಟಿ ರೂ.ಗಳಲ್ಲಿ	೫೯೩೧೫	೬೧೬೦೯	೬೬೫೬೧	೭೩೧೧೫	೭೯೫೭೬	೯೦೧೭೩
ತಲಾ ವರಮಾನ ರೂ.ಗಳಲ್ಲಿ	೧೦೦೪	೧೦೨೦	೧೦೮೦	೧೧೬೩	೧೨೦೫	೧೩೭೦

ಉತ್ಪಾದನೆ ಮತ್ತು ಜನಸಂಖ್ಯಾ ಬೆಳವಣಿಗೆ ಇವುಗಳ ನಡುವಣ ಅಸಮತೋಲನ ಜೀವನಗುಣಮಟ್ಟ ಇಳಿಮುಖವಾಗಲು ಕಾರಣವಾಗಿದೆ. ಜನತೆಯ ಕಠಿಣ ಪರಿಶ್ರಮ ಈ ಜನಸಂಖ್ಯಾ ಹೆಚ್ಚಳದಲ್ಲಿ ಬೆರೆತು ಹೋಗಿದೆ. ಹಸಿರುಕ್ರಾಂತಿ ಕೈಗಾರಿಕಾ ಕ್ರಾಂತಿಗಳ ಫಲಿತಗಳೆಲ್ಲಾ ಊರ್ಜಿತಗೊಳ್ಳದೆ ನಿಷ್ಫಲವಾಗುತ್ತಿವೆ.

ಮಾಹಿತಿ: State Institute of Education, Pune.

ಭಾರತದಲ್ಲಿ ಸಾಕ್ಷರತೆಯ ಪ್ರಮಾಣ

ವರ್ಷ	ಪುರುಷರು	ಸ್ತ್ರೀಯರು	ಒಟ್ಟು
೧೯೦೧	೯ ೮	೦ ೬	೫ ೩
೧೯೧೧	೧೦೬	೧೧	೫೯
೧೯೨೧	೧೨೨	೧೮	೭ ೨
೧೯೩೧	೧೫೬	೨೯	೯ ೫
೧೯೪೧	೨೪೯	೭೩	೧೬೧
೧೯೫೧	೨೪೯	೭೯	೧೬೭
೧೯೬೧	೩೪೪	೧೩೦	೨೪೦
೧೯೭೧	೩೯೫	೧೮೭	೨೯೪
೧೯೮೧	೪೬೭	೨೪೯	೩೬೨
೧೯೯೧	೬೩೮	೩೯೪	೫೨೧

- ಸಾಕ್ಷರತೆಯ ಪ್ರಮಾಣ ನಿರೀಕ್ಷಿತ ಮಟ್ಟ ಮುಟ್ಟಿಲ್ಲ. ಕಾರಣ:-
- ಅಜ್ಞಾನದ ಕಾರಣ ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರಿಗೆ ಆಸಕ್ತಿ ಇಲ್ಲದಿರುವುದು.
- ಅರ್ಥಹೀನ ಸಂಪ್ರದಾಯಗಳು ಮತ್ತು ಆಚಾರಗಳು.
- ಮೂಢನಂಬಿಕೆಗಳು
- ಸ್ತ್ರೀ ಶಿಕ್ಷಣದ ಬಗ್ಗೆ ಅನಾದರಣೆ.
- ಬಡತನ
- ಶಿಕ್ಷಣ ಸೌಲಭ್ಯಗಳ ಕೊರತೆ.

ಸರ್ಕಾರವು ಎಷ್ಟೇ ಸೌಲಭ್ಯಗಳನ್ನು ಕಲ್ಪಿಸಿದರೂ ಅನಕ್ಷರಸ್ಥರ ಸಂಖ್ಯೆ ಏರುತ್ತಲೇ ಇದೆ.

ಮಾಹಿತಿ: Census of India, sup to paper 1, 1991.

ಭಾರತದಲ್ಲಿ ಜನಸಾಂದ್ರತೆ

ಜನಸಾಂದ್ರತೆ ಎಂದರೆ ಪ್ರತಿ ಒಂದು ಚದರ ಕಿಲೋಮೀಟರ್ ಪ್ರದೇಶದಲ್ಲಿ ಇರುವ ಜನರ ಸಂಖ್ಯೆ. ೧೯೯೧ರ ಜನಗಣತಿ ಪ್ರಕಾರ ಪಶ್ಚಿಮ ಬಂಗಾಳ ರಾಜ್ಯದ ಜನಸಾಂದ್ರತೆ ೭೬೭. ಇದು ಅತಿ ಹೆಚ್ಚು (೧೯೯೧ರಲ್ಲಿ) ಎನ್ನಲಾಗಿದೆ.

ಜನಗಣತಿ ವರ್ಷ	ಜನಸಾಂದ್ರತೆ ಭಾರತ	ಕೇರಳ ಅತಿ ಹೆಚ್ಚು	ಸಿಕ್ಕಿಂ ಅತಿ ವಿರಳ
೧೯೦೧	೭೭	೧೬೫	೦೮
೧೯೧೧	೮೨	೧೮೪	೧೨
೧೯೨೧	೮೧	೨೦೧	೧೨
೧೯೩೧	೯೦	೨೪೫	೧೫
೧೯೪೧	೧೦೩	೨೮೪	೧೭
೧೯೫೧	೧೧೭	೩೪೯	೧೯
೧೯೬೧	೧೪೨	೪೩೫	೨೩
೧೯೭೧	೧೭೭	೫೪೯	೩೦
೧೯೮೧	೨೨೧	೬೫೪	೪೪
೧೯೯೧	೨೬೭	೭೪೭*	೫೭

* ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅತಿ ಹೆಚ್ಚು ಸಾಂದ್ರತೆ. ಜಪಾನ್ ದೇಶದ ಜನಸಾಂದ್ರತೆಯು ೨೭೩. ಆದರೆ ಆಸ್ಟ್ರೇಲಿಯಾದಲ್ಲಿ ಜನಸಾಂದ್ರತೆ ಕೇವಲ ಎರಡು.

ಮಾಹಿತಿ: Census of India, paper 2 of 1991.

ವಿವಿಧ ರಾಜ್ಯಗಳಲ್ಲಿ ಅಕ್ಷರಸ್ಥರ ಪ್ರಮಾಣ

(ಪ್ರತಿಶತ)

ಅನಕ್ಷರತೆ ನಮ್ಮ ದೇಶದ ಜನಸಂಖ್ಯೆ ಏರಿಕೆಗೆ ಒಂದು ಪ್ರಬಲ ಕಾರಣ. ವೇಗದಿಂದ ಬೆಳೆಯುತ್ತಿರುವ ಜನಸಂಖ್ಯೆಗೆ ಹಾಗೂ ಅನಕ್ಷರಸ್ಥರ ಹೆಚ್ಚಳಕ್ಕೆ ನೇರ ಸಂಬಂಧವಿದೆ.

ರಾಜ್ಯ	ಪುರುಷರು	ಸ್ತ್ರೀಯರು	ಒಟ್ಟು ಅಕ್ಷರಸ್ಥರು
ಕರ್ನಾಟಕ	೬೭.೨೫	೪೪.೩೪	೫೫.೯೮
ಕೇರಳ	೯೪.೪೫	೮೬.೯.೩	೯೦.೫೯
ಮಹಾರಾಷ್ಟ್ರ	೭೪.೮೪	೫೦.೫೧	೬೩.೦೫
ಮಿಜೋರಾಂ	೮೪.೦೬	೭೮.೦೯	೮೧.೨೩
ತಮಿಳುನಾಡು	೭೪.೮೮	೫೨.೨೯	೬೩.೭೨
ಗೋವ	೮೫.೪೮	೬೮.೨೦	೭೯.೯೬
ರಾಜಸ್ಥಾನ	೫೫.೦೭	೨೦.೮೪	೩೮.೮೧
ಉತ್ತರ ಪ್ರದೇಶ	೫೫.೩೫	೨೬.೦೨	೪೧.೭೧
ಬಿಹಾರ	೫೨.೬೩	೨೩.೧೦	೩೮.೫೪
ಭಾರತ	೬೮.೬೬	೩೯.೪೨	೫೨.೧೧

ಮಾಹಿತಿ: Census of India, sup to paper 1, 1991.

ಬೆಂಗಳೂರು ನಗರದ ಜನಸಂಖ್ಯಾ ಬೆಳವಣಿಗೆ

ಬೆಂಗಳೂರು ನಗರದಲ್ಲಿ ಪ್ರತಿದಶಕದಲ್ಲಿಯೂ ಜನಸಂಖ್ಯೆ ಇಮ್ಮಡಿಗೊಳ್ಳದಿದ್ದರೂ ನಾಗರಿಕ ಸೌಲಭ್ಯಗಳ ಕೊರತೆ ದಿನೇ ದಿನೇ ಹೆಚ್ಚುತ್ತಿದೆ.

ವಿವರ	ವರ್ಷಗಳು		
	೧೯೭೧	೧೯೮೧	೧೯೯೧
೧. ಜನಸಂಖ್ಯೆ ಲಕ್ಷಗಳಲ್ಲಿ	೧೬.೬೪	೨೯.೨೨	೪೧.೩೦
೨. ಜನಸಾಂದ್ರತೆ ಪ್ರತಿ ಚದರ ಕಿ.ಮೀನಲ್ಲಿ ಜನಸಂಖ್ಯೆ	ಲಭ್ಯವಿಲ್ಲ	೧೫೨೬	೨೨೦೩
೩. ಕೊಳಚೆ ಪ್ರದೇಶ			
ಅ. ಜನಸಂಖ್ಯೆ	–	೧.೦೭ ಲಕ್ಷ	೩.೬೫ ಲಕ್ಷ
ಆ. ಸಂಖ್ಯೆ	–	೨೭೩	೪೦೧
೪. ಮನೆಗಳ ಸಂಖ್ಯೆ	೨,೪೫,೩೦೦	೪,೭೧,೫೭೩	೬,೯೩,೦೦೦
೫. ವಾಹನ ಸಂಖ್ಯೆ			
ಅ. ದ್ವಿಚಕ್ರ	೨.೬೪೬	೯೭,೧೧೦	೪,೪೭,೯೧೪
ಆ. ತ್ರಿಚಕ್ರ	೫,೦೫೯	೧೦,೭೨೬	೧೬,೯೦೩
ಇ. ಇತರ ವಾಹನಗಳು			
೧– ಕಾರುಗಳು	೧೪,೦೯೬	೩೩,೫೪೧	೮೮,೪೫೦
೨– ಭಾರ ವಾಹನ	೫,೯೦೩	೯,೨೫೭	೨೫,೭೧೪
೩– ಇತರೆ	೩,೨೬೯	೪,೭೧೧	೭,೧೭೭
೬. ಕಾರ್ಖಾನೆಗಳು	೧,೧೫೦	೪,೫೦೦	೫,೫೦೦

ವಿವಿಧ ಯೋಜನೆಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟ ಹಣ (ದಶಲಕ್ಷ ರೂ.ಗಳಲ್ಲಿ)

ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಹೆಚ್ಚು ಹಣವನ್ನು ಶಿಕ್ಷಣ ಕ್ಷೇತ್ರದ ಪ್ರಗತಿಗಾಗಿ ಮೀಸಲಿಡಲಾಗಿದೆ. ಔಪಚಾರಿಕ ಶಿಕ್ಷಣವಲ್ಲದೆ ವಯಸ್ಕರ ಶಿಕ್ಷಣ ಹಾಗೂ ಅನೌಪಚಾರಿಕ ಶಿಕ್ಷಣ ಕ್ಷೇತ್ರಕ್ಕೂ ಹಣ ವ್ಯಯ ಮಾಡಲಾಗುತ್ತಿದೆ. ಆದರೂ ೧೯೯೧ರಲ್ಲಿ ಭಾರತದ ಒಟ್ಟು ಸಾಕ್ಷರತಾ ಪ್ರಮಾಣ ಇನ್ನೂ ಶೇ.೫೨.೧೧.

ಯೋಜನೆಯ ಅವಧಿ	ವರ್ಷ	ಹಣ(ದಶಲಕ್ಷಗಳಲ್ಲಿ)
ಮೊದಲ ಯೋಜನೆ	೧೯೫೧-೫೬	೧,೫೩೦
ಎರಡನೆ ಯೋಜನೆ	೧೯೫೬-೬೦	೨,೭೩೦
ಮೂರನೆ ಯೋಜನೆ	೧೯೬೧-೬೫	೫,೮೯೦
ಏಕವಾರ್ಷಿಕ ಯೋಜನೆ	೧೯೬೬-೬೮	೩,೨೧೫
ನಾಲ್ಕನೆ ಯೋಜನೆ	೧೯೬೯-೭೪	೮,೨೨೦
ಐದನೇ ಯೋಜನೆ	೧೯೭೪-೭೯	೧೨,೦೦೦
ಆರನೇ ಯೋಜನೆ	೧೯೮೦-೮೫	೧೯,೮೬೦

ಹೆಚ್ಚುತ್ತಿರುವ ಜನಸಂಖ್ಯೆ ಶೈಕ್ಷಣಿಕ ಗುರಿಗಳನ್ನು ಮುಟ್ಟಲು ಅಡ್ಡಿಯಾಗಿದೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರದಲ್ಲಿ ಪ್ರತಿ ವಿದ್ಯಾರ್ಥಿಗೆ ಸರಾಸರಿ ೩,೦೦೦ ರೂ.ಗಳನ್ನು ಖರ್ಚು ಮಾಡಿದರೆ ಭಾರತದಲ್ಲಿ ೩೦೦ ರೂ.ಗಳನ್ನು ಖರ್ಚು ಮಾಡಲಾಗುತ್ತಿಲ್ಲ.

ಮಾಹಿತಿ: ಜನಸಂಖ್ಯಾ ಶಿಕ್ಷಣ, ಡಾ|| ಪಿ.ಹೆಚ್.ರೆಡ್ಡಿ ಹಾಗೂ ಶ್ರೀ ಸಿ.ವಿ ನಾಗರಾಜ್-ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು.

ಪ್ರಪಂಚದ ಅತಿ ಹೆಚ್ಚು ದೊಡ್ಡ ನಗರಗಳು

(೧೯೯೧)

ನಗರದ ಹೆಸರು	ದೇಶ	ಜನಸಂಖ್ಯೆ
೧.ಟೋಕಿಯೋ	ಜಪಾನ್	೨೮,೭೦೦,೦೦೦
೨. ಮೆಕ್ಸಿಕೋ ನಗರ	ಮೆಕ್ಸಿಕೋ	೧೯,೪೦೦,೦೦೦
೩. ನ್ಯೂಯಾರ್ಕ್	ಅಮೆರಿಕಾ	೧೭,೪೦೦,೦೦೦
೪. ಸಾವ್ರೋಪ್ರೋಲೋ	ಬ್ರೆಜಿಲ್	೧೭,೨೦೦,೦೦೦
೫. ಒಸಾಕಾ	ಜಪಾನ್	೧೬,೮೦೦,೦೦೦
೬. ಸಿಯೋಲ್	ದ.ಕೋರಿಯಾ	೧೫,೮೦೦,೦೦೦
೭. ಮಾಸ್ಕೋ	ರಷ್ಯಾ	೧೩,೨೦೦,೦೦೦
೮. ಮುಂಬಯಿ	ಭಾರತ	೧೨,೯೦೦,೦೦೦
೯. ಕಲ್ಕತ್ತಾ	ಭಾರತ	೧೦,೮೦೦,೦೦೦
೧೦. ಬೆಂಗಳೂರು	ಭಾರತ	೪,೧೦೦,೦೦೦

ನಗರಗಳ ಗಾತ್ರ ಎಷ್ಟೇ ಇರಲಿ ಅಲ್ಲಿನ ಸೌಲಭ್ಯಗಳ ಬಗ್ಗೆ ವಿಚಾರ ಮಾಡಿದಾಗ ಭಾರತದ ನಗರಗಳಲ್ಲಿ ನಾಗರೀಕ ಸೌಲಭ್ಯಗಳ ಕೊರತೆ ಅತಿ ಹೆಚ್ಚು.

ಮಾಹಿತಿ: Population crisis Committee (1991). USA.

ಚೀನಾ ಹಾಗೂ ಭಾರತ- ಒಂದು ಹೋಲಿಕೆ.

(೧೯೯೨)

ವಿವರಗಳು	ಚೀನಾ	ಭಾರತ
೧. ಜನಸಂಖ್ಯೆ	೧,೧೬೫.೮ ದಶಲಕ್ಷ	೮೮೨.೬ ದಶಲಕ್ಷ
೨. ಜನನ ಪ್ರಮಾಣ	೧೦೦೦ಕ್ಕೆ ೨೦ ಜನನಗಳು	೧೦೦೦ಕ್ಕೆ ೩೦ ಜನರು
೩.ಮರಣ ಪ್ರಮಾಣ	೧೦೦೦ಕ್ಕೆ ೭ ಜನರು	೧೦೦೦ಕ್ಕೆ ೧೦ ಜನರು
೪. ಬೆಳವಣಿಗೆ ಪ್ರಮಾಣ	ಶೇಕಡಾ ೧.೩	ಶೇಕಡಾ ೨.೦
೫. ಜನಸಂಖ್ಯೆ ದ್ವಿಗುಣಗೊಳ್ಳಲು	೫೩ ವರ್ಷಬೇಕು	೩೪ ವರ್ಷಬೇಕು.
೬. ಕ್ರಿ.ಶ.೨೦೧೦ರಲ್ಲಿ ಜನಸಂಖ್ಯೆ	೧,೪೨೦.೩ ದಶಲಕ್ಷ	೧,೧೭೨.೧ ದಶಲಕ್ಷ
೭. ಶಿಶು ಮರಣ ಪ್ರಮಾಣ	೧೦೦೦ ಜನನಗಳಿಗೆ ೩೪ ಮಕ್ಕಳು	೧೦೦೦ ಜನನಗಳಿಗೆ ೯೧ ಮಕ್ಕಳು
೮. ೧೫ ವರ್ಷದೊಳಗಿನವರ ಜನಸಂಖ್ಯೆ	ಶೇ.೨೮	ಶೇ.೩೬
೯. ೬೫ ವರ್ಷಗಳ ನಂತರದ ಜನಸಂಖ್ಯೆ	ಶೇ.೦೬	ಶೇ.೦೪
೧೦. ಆಯುರ್ಮಾನ	೭೦ ವರ್ಷಗಳು	೫೮ ವರ್ಷಗಳು
೧೧. ನಗರಗಳಲ್ಲಿ ಜನಸಂಖ್ಯೆ	ಶೇ.೨೬	ಶೇ. ೨೬

ಮಾಹಿತಿ: ವಿಶ್ವ ಜನಸಂಖ್ಯಾ ಮಾಹಿತಿ ಕೇಂದ್ರ, ವಾಷಿಂಗ್‌ಟನ್ ವರದಿ ೧೯೯೨.

ಭಾರತದಲ್ಲಿ ನಗರಗಳ ಬೆಳವಣಿಗೆ

ಜನಸಂಖ್ಯೆಯನ್ನು ಆಧರಿಸಿ ನಗರಗಳ ವರ್ಗೀಕರಣ ಮಾಡಲಾಗುತ್ತದೆ. ಭಾರತದಲ್ಲಿ ೯೦ ವರ್ಷಗಳ ಅವಧಿಯಲ್ಲಿ ನಗರದಲ್ಲಿ ವಾಸವಾಗಿರುವವರ ಜನಸಂಖ್ಯೆ ಇಮ್ಮಡಿಗಿಂತಲೂ ಹೆಚ್ಚಾಗಿದೆ.

ವರ್ಷ	ನಗರಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ನಗರಗಳಲ್ಲಿನ ಜನಸಂಖ್ಯೆ (ದಶಲಕ್ಷಗಳಲ್ಲಿ)	ಒಟ್ಟು ಜನಸಂಖ್ಯೆ ನಗರಗಳದ್ದು (ಶೇ)	ದಶವಾರ್ಷಿಕ ಹೆಚ್ಚಳ (ಶೇ)
೧೯೦೧	೧೮೨೭	೨೩೮	೨೫	೧೦.೮೪	—
〃	೧೮೧೫	೨೫೨	೨೫	೧೦.೨೯	೦.೩೫
೧೯೨೧	೧೯೪೯	೨೫೧	೨೮	೧೧.೧೮	೮.೨೭
೧೯೩೧	೨೦೭೨	೨೭೮	೩೮	೧೧.೯೯	೧೯.೧೨
೧೯೪೧	೨೨೫೦	೩೧೮	೪೪	೧೩.೬೬	೩೧.೯೭
೧೯೫೧	೨೩೪೩	೩೬೧	೬೨	೧೭.೨೯	೪೧.೪೨
೧೯೬೧	೨೩೬೫	೪೩೯	೭೮	೧೭.೯೭	೩೬.೪೧
೧೯೭೧	೨೫೯೦	೫೪೮	೧೦೯	೧೯.೯೧	೩೮.೨೩
೧೯೮೧	೩೩೭೮	೬೮೩	೧೫೯	೨೫.೩೪	೩೬.೧೪
೧೯೯೧	೩೭೬೮	೮೪೪	೨೧೭	೨೫.೭೨	೩೬.೧೯

ನಗರಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆಲ್ಲಾ ನಾಗರೀಕ ಸೌಲಭ್ಯಗಳ ಕೊರತೆಯೂ ಹೆಚ್ಚುವುದು.

ಮಾಹಿತಿ: Census of India, paper 2, 1991.

ಭಾರತ-ಕರ್ನಾಟಕ: ಒಂದು ಹೋಲಿಕೆ

ಆಧಾರ: ೧೯೯೧ರ ಜನಗಣತಿ

ವಿವರ	ಭಾರತ	ಕರ್ನಾಟಕ
ಅ. ಜನಸಂಖ್ಯೆ :-		
ಒಟ್ಟು	೮೪೩,೯೩೦,೮೬೧	೪೪,೮೧೭,೩೯೮
ಪುರುಷರು	೪೩೭,೫೯೭,೯೨೯	೨೨,೮೬೧,೪೦೯
ಸ್ತ್ರೀಯರು	೪೦೬,೩೩೨,೯೩೨	೨೧,೯೫೫,೯೮೮
ಆ. ದಶಕದಲ್ಲಿ ಜನಸಂಖ್ಯಾ ಬೆಳನಣಿಗೆಗೆ,೧೯೮೧-೯೧:	ಶೇ.೨.೧೪	ಶೇ. ೨.೦೯
ಇ. ಜನಸಾಂದ್ರತೆ: (೧ ಚದರ ಕಿ.ಮೀ.ನಲ್ಲಿ ಇದ್ದ ಜನರ ಸಂಖ್ಯೆ):	೨೬೭	೨೩೪
ಈ. ಸಾಕ್ಷರತಾ ಪ್ರಮಾಣ:		
ಒಟ್ಟು	ಶೇ.೫೨.೧೧	ಶೇ.೫೫.೯೮
ಪುರುಷರು:	ಶೇ.೬೩.೮೬	ಶೇ.೬೭.೨೫
ಸ್ತ್ರೀಯರು:	ಶೇ.೩೯.೪೨	ಶೇ.೪೪.೩೪
ಉ. ಲಿಂಗ ಪ್ರಮಾಣ: (ಪ್ರತಿ ೧೦೦೦ ಪುರುಷರಿಗೆ ಸ್ತ್ರೀಯರ ಸಂಖ್ಯೆ)	೯೨೯	೯೬೦

ಮಾಹಿತಿ: Census of India, paper 1, (provisional Tables) paper 2 of , 1991.

ಭಾರತದ ಜನಸಂಖ್ಯಾ ಚಿತ್ರಣ (೧೯೯೧)

ಕ್ರಮ ಸಂಖ್ಯೆ	ವಿವರ	ಶೇಕಡಾವಾರು
೧.	೦–೧೪ ವರ್ಷದ ವಯೋಮಾನದವರು	३೯.೮೦
೨.	೫೯ ವರ್ಷಕ್ಕಿಂತ ಹೆಚ್ಚಿನವರು	೧೦.೭೦
३.	ಯಾವುದೇ ರೀತಿಯ ಉತ್ಪಾದನಾ ಕಾರ್ಯಕ್ಕೆ ಬಾರದಂಥವರು	४೯.೫೦
४.	ವಿವಿಧ ರೀತಿಯ ಉತ್ಪಾದನಾ ಕಾರ್ಯಕ್ಕೆ ಬರುವವರು	೫೦.೫೦
೫.	ಆದರೆ ಔದ್ಯೋಗಿಕ ಅವಕಾಶಗಳು (ಲಭ್ಯವಿರುವುದು)	३೭.೫೫
೬.	ಆರ್ಥಿಕವಾಗಿ ಅವಲಂಬಿತರು (ಮಕ್ಕಳು, ವೃದ್ಧರು ಹಾಗೂ ನಿರುದ್ಯೋಗಿಗಳು)	೬೨.४೫

ಮುಂದುವರಿದ ರಾಷ್ಟ್ರಗಳಲ್ಲಿ:

ಅ. ೧೫–೫೮ ವರ್ಷ ವಯೋಮಾನದವರಲ್ಲಿ ಉತ್ಪಾದನಾ ಕಾರ್ಯಗಳಲ್ಲಿ ಉದ್ಯುಕ್ತರಾದವರು ಶೇ.೬೭

ಆ. ೦–೧४ ಹಾಗೂ ೫೯ ವರ್ಷಕ್ಕಿಂತ ಹೆಚ್ಚು ವಯೋಮಿತಿಯವರಲ್ಲಿ ಆರ್ಥಿಕವಾಗಿ ಸ್ವತಂತ್ರರು ಶೇ. ३೦

ಮಾಹಿತಿ: Census of India, paper 11 , 1991.

ನಗರಗಳ ವರ್ಗೀಕರಣ

ಜನಸಂಖ್ಯೆಯ ಆಧಾರದ ಮೇಲೆ ನಗರಗಳನ್ನು ಆರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ:

ವರ್ಗ	೧.	೧,೦೦,೦೦೦ ಹಾಗೂ ಹೆಚ್ಚು ಜನಸಂಖ್ಯೆ.
	೨.	೫೦,೦೦೦ ರಿಂದ ೯೯,೯೯೯.
	೩.	೨೦,೦೦೦ ರಿಂದ ೪೯,೯೯೯.
	೪.	೧೦,೦೦೦ ರಿಂದ ೧೯,೯೯೯
	೫.	೫,೦೦೦ ದಿಂದ ೯,೯೯೯
	೬.	೫,೦೦೦ ಕ್ಕಿಂತ ಕಡಿಮೆ.

ನಗರಗಳನ್ನು ಮತ್ತೆ ಐದು ಗುಂಪುಗಳನ್ನಾಗಿ ವಿಂಗಡಿಸಿ 'ಮೆಗಾಸಿಟಿ' ಎಂದು ವರ್ಗೀಕರಿಸಲಾಗಿದೆ.

ವರ್ಗ- ಎಂ.೧.	ಜನಸಂಖ್ಯೆ	೧,೦೦,೦೦೦ದಿಂದ ೧,೯೯,೯೯೯ರವರೆಗೆ
ಎಂ.೨	”	೨,೦೦,೦೦೦ದಿಂದ ೨,೯೯,೯೯೯ ”
ಎಂ.೩	”	೩,೦೦,೦೦೦ ದಿಂದ ೪,೯೯,೯೯೯ ”
ಎಂ.೪	”	೫,೦೦,೦೦೦ ದಿಂದ ೯,೯೯,೯೯೯ ”
ಎಂ.೫	”	೧,೦೦೦,೦೦೦ ಹಾಗೂ ಹೆಚ್ಚು

೧೯೯೧ರ ಪಾಪ್ಯುಲೇಷನ್ ಕ್ರೈಸಿಸ್ ಅಮೆರಿಕಾ ಇವರ ವರದಿಯಂತೆ ವಿಶ್ವದ ಅತಿ ಹೆಚ್ಚು ಜನಸಂಖ್ಯೆಯ ನಗರ - ಟೋಕಿಯೋ (ಜಪಾನ್) ಜನಸಂಖ್ಯೆ:- ೨೮,೭೦೦,೦೦೦.

ಮಾಹಿತಿ: Census of India, paper 2, 1991 and population crisis committee, USA (1991).

ಅಜ್ಞಾನ ಮೂಢನಂಬಿಕೆ ಕಂದಾಚಾರ ಇವುಗಳಿಂದಾಗಿ ಜನಸಂಖ್ಯಾ ಏರಿಕೆ

ಅಜ್ಞಾನ:

ಅ. ಭಾರತದ ಜನಸಂಖ್ಯೆಯ ೨/೩ ಭಾಗ ಅನಕ್ಷರಸ್ಥರು.

ಆ. ಜನನದ ಬಗ್ಗೆ ಇರುವ ತಪ್ಪು ಕಲ್ಪನೆಗಳು.

- ಮಕ್ಕಳು ದೇವರಿತ್ತ ವರ.
- ಗರ್ಭನಿರೋಧಕಗಳ ಉಪಯೋಗ ದೇವರಿಗೆ ಇಷ್ಟವಿಲ್ಲ.
- ಕುಟುಂಬ ಯೋಜನಾ ಶಸ್ತ್ರಕ್ರಿಯೆಯಿಂದ ಮಾನವನಿಗೆ ನಪುಂಸಕತ್ವ.

ಮೂಢನಂಬಿಕೆಗಳು:

- ಮೋಕ್ಷ ಪ್ರಾಪ್ತಿಗೆ ಗಂಡು ಸಂತಾನ ಅವಶ್ಯಕ.
- ಕನ್ಯಾದಾನ ಶ್ರೇಷ್ಠದಾನ-ಹೆಣ್ಣು ಸಂತಾನ ಅವಶ್ಯಕ.
- ಹುಟ್ಟಿಸಿದವನು ಹುಲ್ಲು ಮೇಯಿಸಿಯಾನೇ ಎಂಬ ಕಲ್ಪನೆ.
- ಅಧಿಕ ಜನರಿಂದ ಕುಟುಂಬಕ್ಕೆ ಆಶ್ರಯ........ಮುಂತಾದವು.

ರೂಢಿ ಮತ್ತು ಸಂಪ್ರದಾಯಗಳು:

- ಗಂಡು ಸಂತಾನಕ್ಕೆ ಮಹತ್ವವಾದ ಸ್ಥಾನ ಕೊಡಲೇಬೇಕು.
- ಆಸ್ತಿಗೆ ವಾರಸುದಾರ ಗಂಡಸು.
- ತಾಯಿಯ ಆರೋಗ್ಯವನ್ನು ಲೆಕ್ಕಿಸದೆ ಸಂತಾನ ಪಡೆಯಬೇಕು.
- ಬಂಜೆಯು ಕುಟುಂಬಕ್ಕೆ ಹೊರೆ...... ಇತ್ಯಾದಿ.

ಈ ತಪ್ಪು ಕಲ್ಪನೆಗಳನ್ನು ತೊಡೆದುಹಾಕಲು ಶಿಕ್ಷಣ ಅಗತ್ಯ

ಭಾರತದ ಅತಿ ಹೆಚ್ಚು ಜನಸಂಖ್ಯೆಯ
ಆರು ನಗರಗಳು (೧೯೯೧)

ಹತ್ತು ಲಕ್ಷ ಜನಸಂಖ್ಯೆಯುಳ್ಳ ೨೩ ನಗರಗಳನ್ನು ಭಾರತದಲ್ಲಿ ಕಾಣುತ್ತೇವೆ. ಅವುಗಳಲ್ಲಿ ಇಲ್ಲಿ ತಿಳಿಸಿರುವ ಆರು ನಗರಗಳು ವಿಶ್ವದ ಪ್ರಥಮ ನೂರು ನಗರಗಳಲ್ಲಿ ಸೇರಿವೆ. ಜನಸಂಖ್ಯೆಯಲ್ಲಿ ಬೃಹತ್ ನಗರಗಳಾದರೂ ನಾಗರಿಕ ಸೌಲಭ್ಯ ಒದಗಿಸುವುದರಲ್ಲಿ ಹಿನ್ನಡೆಯುತ್ತಿವೆ.

ಕ್ರಮ ಸಂಖ್ಯೆ	ನಗರ	ವಿವಿಧ ವರ್ಷಗಳಲ್ಲಿ ಜನಸಂಖ್ಯೆ ೧೯೭೧	೧೯೮೧	೧೯೯೧
೧.	ವಿಶಾಲ ಮುಂಬಯಿ	೫,೯೭೦,೫೭೫	೮,೨೪೩,೪೦೫	೧೨,೫೯೬,೨೪೩
೨.	ಕಲ್ಕತ್ತಾ	೭,೪೨೦,೩೦೦	೯,೧೯೪,೦೧೮	೧೧,೦೨೧,೯೧೮
೩.	ದೆಹಲಿ	೩,೬೪೭,೦೦೩	೫,೭೨೯,೨೮೩	೮,೪೧೯,೦೮೪
೪.	ಮದರಾಸು	೩,೧೬೯,೯೩೦	೪,೨೮೯,೩೪೭	೫,೪೨೧,೯೮೫
೫.	ಹೈದರಾಬಾದ್	೧,೭೯೬,೩೩೯	೨,೫೪೫,೮೩೬	೪,೩೪೪,೪೩೭
೬.	ಬೆಂಗಳೂರು	೧,೬೬೪,೨೦೮	೨,೯೨೧,೭೫೧	೪,೧೩೦,೨೮೮

ಮಾಹಿತಿ: Census of India, paper 2 of 1991.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ದಾಖಲಾತಿ
(ಲಕ್ಷಗಳಲ್ಲಿ)

ಶಾಲೆಯ ದಾಖಲಾತಿ ಶ್ರೇಣಿ	ವರ್ಷಗಳು			
	೧೯೬೦-೬೧	೧೯೬೫-೬೬	೧೯೭೫-೭೬	೧೯೭೯-೮೦
ಕಿರಿಯ ಪ್ರಾಥಮಿಕ ಹಂತ:				
ಒಟ್ಟು ದಾಖಲಾತಿ	೩೪.೦	೪೦.೪	೩೪.೭	೭೦.೯
ಬಾಲಕರು	೨೩.೬	೩೨.೨	೪೧.೬	೪೩.೮
ಬಾಲಕಿಯರು	೧೧.೪	೧೮.೩	೨೪.೦	೨೭.೨
ಹಿರಿಯ ಪ್ರಾಥಮಿಕ ಹಂತ:				
ಒಟ್ಟು ದಾಖಲಾತಿ	೬.೭	೧೦.೪	೧೬.೪	೧೯.೪
ಬಾಲಕರು	೪.೧	೭.೭	೧೧.೪	೧೩.೦
ಬಾಲಕಿಯರು	೧.೬	೨.೯	೪.೦	೬.೪
ಮಾಧ್ಯಮಿಕ ಹಂತ:				
ಒಟ್ಟು ದಾಖಲಾತಿ	೨.೧	೪.೦	೭.೪	೮.೩
ಬಾಲಕರು	೨.೩	೩.೧	೫.೩	೪.೧
ಬಾಲಕಿಯರು	೦.೬	೧.೧	೨.೧	೨.೪

ದಾಖಲಾತಿಯು ಹಂತ ಹಂತವಾಗಿ ಉತ್ತಮವಾಗುತ್ತಿದೆ. ಬಾಲಕಿಯರ ದಾಖಲಾತಿ ಇನ್ನೂ ಉತ್ತಮವಾಗಬೇಕಾಗಿದೆ. ಮೂಢನಂಬಿಕೆ ಕಂದಾಚಾರ ಇತ್ಯಾದಿಗಳು ಶಿಕ್ಷಣದಿಂದ ಮಾತ್ರವೇ ದೂರವಾಗಬಹುದು.

ಮಾಹಿತಿ: ಭಾರತ ಸರ್ಕಾರದ ವಾರ್ಷಿಕ ಪ್ರಗತಿ ಪುಸ್ತಕ ೧೯೮೧.

ಅಧಿಕ ಜನಸಂಖ್ಯೆ

ನಗರೀಕರಣ - ಸಮಸ್ಯೆಗಳು

- ಯೋಜಿತವಲ್ಲದ ವಲಸೆ.
- ಅತಿಯಾದ ಕೈಗಾರಿಕೀಕರಣ
  (ಮಾಲಿನ್ಯಭರಿತ ಕೈಗಾರಿಕೆಗಳು)
- ಕೊಳಚೆ ಪ್ರದೇಶಗಳ ಹೆಚ್ಚಳ
- ಮಾನವೀಯ ಮೌಲ್ಯಗಳ ಕುಸಿತ.
- ಅನಾರೋಗ್ಯಕರ ಸ್ಪರ್ಧಾವಾತಾವರಣ.
- ಸಾಮಾಜಿಕ ಅಸಂಘಟನೆ.
  (ಕಪ್ಪುಹಣ, ಕಲಬೆರಕೆ, ಕೃತಕ ಕೊರತೆ, ಗೂಂಡಾಗಿರಿ, ದರೋಡೆ, ಆತ್ಮಹತ್ಯೆ ದುಶ್ಚಟಗಳು, ಬಾಲಾಪರಾಧಗಳು, ಬಾಲ ಕಾರ್ಮಿಕರು, ಅನೈತಿಕ ಲೈಂಗಿಕ ಸಂಪರ್ಕಗಳು ಹಾಗೂ ರೋಗಗಳು...)
- ಅಸಮರ್ಪಕ ನಾಗರಿಕ ಸೌಲಭ್ಯಗಳು
- ಅರ್ಥವಿಲ್ಲದ ನಾಗರೀಕರಣ....... ಇತ್ಯಾದಿ.

ಅನಕ್ಷರಸ್ಥರ ವಿದ್ಯಾರ್ಹತೆ ರೀತ್ಯಾ ವಿಂಗಡಣೆ

೧೯೭೧ರಲ್ಲಿ ಶೇ ೨೯.೪ ಅಕ್ಷರಸ್ಥರಿದ್ದರು. ಅವರ ಶಿಕ್ಷಣ ಮಟ್ಟದ ವಿಶ್ಲೇಷಣೆ.

ಸಾಕ್ಷರತಾ ಮಟ್ಟ -ಅಕ್ಷರಸ್ಥರು	ಅಕ್ಷರಸ್ಥರ ಜನಸಂಖ್ಯೆ (ಪ್ರತಿಶತ) ಒಟ್ಟು	ಪುರುಷರು	ಸ್ತ್ರೀಯರು
೧. ಯಾವುದೇ ರೀತಿಯ ಔಪಚಾರಿಕ ಶಿಕ್ಷಣ ಇಲ್ಲದವರು:	೩೬.೯	೩೫.೪	೪೦.೩
೨. ಯಾವುದಾದರೊಂದು ಔಪಚಾರಿಕ ಶಿಕ್ಷಣ ಇದ್ದವರು:	೬೩.೧	೬೪.೬	೫೯.೭
ಶಿಕ್ಷಣ ಪಡೆದ ಅಕ್ಷರಸ್ಥರು.			
೧. ಪ್ರಾಥಮಿಕ ಶಿಕ್ಷಣ	೩೧.೫	೩೦.೫	೩೪.೧
೨. ಮಾಧ್ಯಮಿಕ ಶಿಕ್ಷಣ	೧೮.೦	೧೮.೮	೧೬.೦
೩. ಪ್ರೌಢ ಶಿಕ್ಷಣ	೧೧.೦	೧೨.೩	೭.೮
೪. ಡಿಪ್ಲೊಮೋ ಶಿಕ್ಷಣ (ತರಬೇತಿ)	೦.೪	೦.೪	೦.೪
೫. ಪದವೀಧರ/ಸ್ನಾತಕ ಶಿಕ್ಷಣ	೨.೨	೨.೬	೧.೪

ಇದೇ ರೀತಿ ವಿವಿಧ ಜನಗಣತಿ ವರ್ಷಗಳಲ್ಲಿನ ಅಕ್ಷರಸ್ಥರ ಶಿಕ್ಷಣ ಮಟ್ಟದ ವಿಂಗಡಣೆ ವಿಶ್ಲೇಷಣೆ ಸಾಧ್ಯ.

ಮಾಹಿತಿ: State Institute of Education, Pune-1981.

ಪ್ರತಿ ವರ್ಷ ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾಗುವ ಹೆಚ್ಚು ಸೌಲಭ್ಯಗಳು

ಪ್ರತಿ ವರ್ಷ ಭಾರತದ ಜನಸಂಖ್ಯೆಗೆ ಸುಮಾರು ೧೬ ದಶಲಕ್ಷ ಮಂದಿ ಹೆಚ್ಚು ಸೇರಿಸಲ್ಪಡುತ್ತಿದ್ದಾರೆ.

ಈ ಜನಸಂಖ್ಯೆಗೆ ಅಗತ್ಯವಿರುವ ಅಧಿಕ ಸಂಪನ್ಮೂಲಗಳು:

- ೫೫ ದಶಲಕ್ಷ ಹೊಸಮನೆಗಳು
- ೨೩.೨ ಕೋಟಿ ಮೀಟರ್ ಬಟ್ಟೆ
- ೪.೬ ಲಕ್ಷ ಶಾಲಾ ಶಿಕ್ಷಕರು.
- ೧.೬ ಲಕ್ಷ ಶಾಲೆಗಳು.
- ೧.೬ ಲಕ್ಷ ಆಸ್ಪತ್ರೆಗಳು.
- ೫೦.೦ ಲಕ್ಷ ಹೊಸ ಉದ್ಯೋಗಗಳು.

ಇದೊಂದು ಅಂದಾಜು ಮಾತ್ರ. ಈ ಪಟ್ಟಿಗೆ ಕೊನೆ ಇಲ್ಲ!

ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಷ್ಟೇ ಅಲ್ಲ. ಇಡೀ ಪರಿಸರದ ಮೇಲೆ ಇದು ತೀವ್ರವಾದ ಪರಿಣಾಮ ಬೀರುತ್ತದೆ.

ಮಾಹಿತಿ: ಭಾರತ ಸರ್ಕಾರದ ಪ್ರಕಟಣೆ Centre calling, June 1991.

ಭಾರತದಲ್ಲಿ ಸಾಕ್ಷರತೆಯ ಸ್ಥಿತಿ
(೧೯೮೧-೯೧)

ಅಕ್ಷರಸ್ಥರು/ ಅನಕ್ಷರಸ್ಥರು	ಒಟ್ಟು	ಪುರುಷರು (೧೦೦೦ಗಳಲ್ಲಿ)	ಸ್ತ್ರೀಯರು
ಅಕ್ಷರಸ್ಥರು:			
ವರ್ಷ ೧೯೮೧	೨,೩೩,೯೪೭	೧,೫೬,೯೫೩	೭೬,೯೯೪
೧೯೯೧	೩,೫೨,೫೪೩	೨,೨೪,೫೪೫	೧,೨೭,೯೯೮
೧೯೮೧ ಹಾಗೂ ೧೯೯೧ರ ವ್ಯತ್ಯಾಸ:	೧,೧೮,೫೯೬	೬೭,೫೯೨	೫೧,೦೦೪
ಅನಕ್ಷರಸ್ಥರು:			
ವರ್ಷ ೧೯೮೧	೩,೦೧,೯೩೩	೧,೨೦,೯೦೨	೧,೮೧,೦೩೧
೧೯೯೧	೩,೨೪,೦೩೦	೧,೨೬,೬೯೪	೧,೯೭,೩೩೬
೧೯೮೧ ಹಾಗೂ ೧೯೯೧ರ ವ್ಯತ್ಯಾಸ:	೨೨,೦೯೭	೫,೭೯೨	೧೬,೩೦೫

ಭಾರತದಲ್ಲಿ ಸಾಕ್ಷರತಾ ಪ್ರಮಾಣ ಶೇ.೫೨.೧೧-೧೯೯೧

ಅನಕ್ಷರಸ್ಥರ ಹೆಚ್ಚಳ ಹಾಗೂ ಜನಸಂಖ್ಯಾ ಹೆಚ್ಚಳಕ್ಕೆ ನೇರ ಸಂಬಂಧ ಇರುವುದನ್ನು ಗಮನಿಸಬಹುದು.

ಮಾಹಿತಿ: Census of India, sup to paper 1, 1991.

ಕನಿಷ್ಠ ಅವಶ್ಯಕತೆಗಳ ಪೂರೈಕೆಯ ಕಾರ್ಯಕ್ರಮ

ಸಾರ್ವತ್ರಿಕವಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಬದಲಾವಣೆ ಉಂಟಾಗಲಿ ಮತ್ತು ಜನತೆಯ ಅವಶ್ಯಕತೆಗಳ ಪೂರೈಕೆಯಾಗಲಿ ಎಂದು ಸರ್ಕಾರ ಕನಿಷ್ಠ ಅವಶ್ಯಕತೆಗಳ ಪೂರೈಕೆ ಕಾರ್ಯಕ್ರಮ ಹಾಕಿಕೊಂಡಿದೆ.

೧. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

೨. ಆರೋಗ್ಯಕರ ನೀರಿನ ಸರಬರಾಜು.

೩. ನಿರಾಶ್ರಿತ ಕಾರ್ಮಿಕರಿಗೆ ವಸತಿ ಸೌಕರ್ಯ.

೪. ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ.

೫. ಕೊಳಗೇರಿಗಳ ಮೇಲ್ಪಾಡು.

೬. ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಪೂರೈಕೆ.

೭. ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳು.

೮. ಕುಟುಂಬ ಕಲ್ಯಾಣ ಕಾರ್ಯಕ್ರಮಗಳು...... ಇತ್ಯಾದಿ.

ವಿವಾಹದ ವಯಸ್ಸು ಮತ್ತು ಸ್ತ್ರೀ ಫಲವತ್ತತೆ

೧. ಗರ್ಭಧಾರಣಾ ಅವಧಿ (ಸರಾಸರಿ)

೧೫ನೇ ವರ್ಷದಿಂದ ೪೫ನೇ ವರ್ಷಗಳವರೆಗೆ........೩೦ ವರ್ಷಗಳು.

೨. ಸಂತಾನಾಭಿವೃದ್ಧಿಗೆ ಅಪೇಕ್ಷಣೀಯ ಅವಧಿ

(ತಾಯಿ ಮತ್ತು ಶಿಶುವಿನ ಆರೋಗ್ಯದ ದೃಷ್ಟಿಯಿಂದ)

೨೨ನೇ ವರ್ಷದಿಂದ ೨೬ನೇ ವರ್ಷಗಳವರೆಗೆ.........೦೪ ವರ್ಷಗಳು.

೩. ಗರ್ಭಧಾರಣಾ ಅವಧಿ- ಇಳಿಮುಖವಾಗುವ ಸ್ಥಿತಿ

೨೬ನೇ ವರ್ಷದಿಂದ ೩೮ನೇ ವರ್ಷಗಳವರೆಗೆ.........೧೨ ವರ್ಷಗಳು.

ಕಾನೂನಿನ ಪ್ರಕಾರ ಸ್ತ್ರೀ ವಿವಾಹವಾಗುವ ಕನಿಷ್ಠ ವಯಸ್ಸು- ೧೮ ವರ್ಷಗಳು.

ಸ್ತ್ರೀಯರು ಸಾಮಾನ್ಯವಾಗಿ ತಮ್ಮ ಜೀವಿತ ಅವಧಿಯಲ್ಲಿ ಮೂವತ್ತು ವರ್ಷಗಳ ಕಾಲ ಮಕ್ಕಳನ್ನು ಪಡೆಯಬಲ್ಲರು. ಆದರೆ ತಡವಾಗಿ ವಿವಾಹವಾಗಿ ಅಪೇಕ್ಷಣೀಯ ಅವಧಿಯಲ್ಲಿ ಒಂದೇ ಮಗುವನ್ನು ಪಡೆಯುವುದು. ಆಗ ಆ ಮಗುವಿಗೆ ಎಲ್ಲ ರೀತಿಯ ಆರೋಗ್ಯ ರಕ್ಷಣೆ ನೀಡಲು ಸಾಧ್ಯ. ಶಿಕ್ಷಣ ಕೊಡಿಸಲು ಅವಕಾಶವಿದೆ.

ವಿವಾಹದ ವಯಸ್ಸು - ಒಂದು ಚಿಂತನೆ

ಸುಮಾರು ಹದಿನೈದನೇ ವರ್ಷದ ಸಮಯಕ್ಕೆ ಗಂಡು-- ಹೆಣ್ಣು ಇವರಿಬ್ಬರ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ ಅವಯವಗಳು ಪೂರ್ಣ ಬೆಳೆಯುತ್ತವೆ ಹಾಗೂ ಪಕ್ವತೆ ಹೊಂದುತ್ತವೆ. ಅವರಲ್ಲಿ ಸಂತಾನಾಭಿವೃದ್ಧಿಯ ಸಾಧ್ಯತೆಗಳು ಇರುತ್ತವೆ.

ಬೌದ್ಧಿಕ ಹಾಗೂ ಶಾರೀರಿಕವಾಗಿ ಮಕ್ಕಳನ್ನು ಪಡೆಯುವಷ್ಟು ಬೆಳವಣಿಗೆ ಉಂಟಾಗಿರುವುದಿಲ್ಲ.

ತೀರಾ ತಡವಾಗಿ ವಿವಾಹವಾಗುವುದೂ ಸಹ ಸೂಕ್ತವಲ್ಲ. ವಯಸ್ಸಾದಂತೆ ಪುರುಷರಲ್ಲಿ ವೀರ್ಯಾಣುಗಳ ಪ್ರಮಾಣ ಕಡಿಮೆ. ಸಂತಾನ ಪ್ರಾಪ್ತಿಯ ಸಾಧ್ಯತೆ ಇಳಿಮುಖವಾಗಬಹುದು.

ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಕಾರ್ಯಕ್ರಮ

ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಕೆ ಮಾಡುವುದು ಪ್ರಯಾಸಕರ ಕೆಲಸವೇ. ಪ್ರತಿ ವರ್ಷ ಹೆಚ್ಚುತ್ತಿರುವ ಜನಸಂಖ್ಯೆಗೆ (೧೬ ದಶಲಕ್ಷ) ಸುಮಾರು ೧೫,೦೦೦,೦೦೦ ಕ್ವಿಂಟಲ್ ಆಹಾರವೇ ಹೆಚ್ಚು ಬೇಕು. ಆದ್ದರಿಂದ ಆಹಾರದ ಉತ್ಪಾದನೆ ಹೆಚ್ಚಿಸಲೆಂದು ಅನೇಕ ಕಾರ್ಯಕ್ರಮಗಳಿವೆ.

೧. ವೈಯಕ್ತಿಕ ಹಾಗೂ ಸಾಮುದಾಯಿಕ ಪ್ರಯೋಜನಗಳಿಗಾಗಿ ಕಾರ್ಯಕ್ರಮ:

ಅ. ತರಬೇತಿ ಕಾರ್ಯಕ್ರಮಗಳು.

ಆ. ಸುಧಾರಿಸಿದ ತಳಿ ಮತ್ತು ಬೀಜಗಳ ಸರಬರಾಜು.

ಇ. ವಿವಿಧ ರೀತಿಯ ಭಾವಿಗಳನ್ನು ತೋಡಿ ನೀರು ಸರಬರಾಜು.

ಈ. ಸಾಗಾಣಿಕೆ ಸಾಧನಗಳ ಸರಬರಾಜು.

೨.ಸಾಮಾನ್ಯ ಸಾರ್ವತ್ರಿಕ ಅನುಕೂಲಗಳಿಗಾಗಿ ಕ್ರಮ:

ಅ. ನೀರಾವರಿ ಯೋಜನೆಗಳು.

ಆ. ರಾಸಾಯನಿಕ ಗೊಬ್ಬರ ಕಾರ್ಖಾನೆಗಳ ಸ್ಥಾಪನೆ.

ಇ. ಸಾಲ ಸೌಲಭ್ಯಗಳು.

ಈ. ವಿವಿಧ ರೀತಿಯ ಗೊಬ್ಬರಗಳ ಸರಬರಾಜು.

ಉ. ಕಳೆನಾಶಕ ಹಾಗೂ ಕೀಟನಾಶಕ ಸಾಮಗ್ರಿ ಒದಗಿಸುವುದು.

ಊ.ಅತಿ ಹೆಚ್ಚು ಇಳುವರಿಗೆ ಪ್ರೋತ್ಸಾಹಕಗಳು.

೩. ಮಣ್ಣಿನ ಸಂರಕ್ಷಣಾ ಕಾರ್ಯಗಳು.

೪. ಜೈವಿಕ ಗೊಬ್ಬರಗಳ ಉತ್ಪಾದನೆಗೆ ಪ್ರೋತ್ಸಾಹ.......... ಇತ್ಯಾದಿ.

ಭಾರತದಲ್ಲಿ ಸ್ತ್ರೀ-ಪುರುಷ ಪ್ರಮಾಣ

ಪ್ರತಿ ೧೦೦೦ ಪುರುಷರಿಗೆ ಆ ಪ್ರದೇಶದಲ್ಲಿನ ಸ್ತ್ರೀಯರ ಸಂಖ್ಯೆಯನ್ನು ಹೋಲಿಸಿ ಸ್ತ್ರೀ ಪುರುಷ ಪ್ರಮಾಣ ಲಿಂಗ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ.

ವರ್ಷ	೧೯೦೧	೧೯೧೧	೧೯೨೧	೧೯೩೧	೧೯೪೧	೧೯೫೧	೧೯೬೧	೧೯೭೧	೧೯೮೧
ಲಿಂಗ	೯೭೨	೯೬೪	೯೫೫	೯೫೦	೯೪೫	೯೪೬	೯೪೧	೯೩೦	೯೩೪

ಪ್ರಮಾಣ:
(ಪ್ರತಿ ೧೦೦೦ ಪುರುಷರಿಗೆ ಸ್ತ್ರೀಯರು)

ಸ್ತ್ರೀಯರ ಸಂಖ್ಯೆ ಕಡಿಮೆ ಇರಲು ಕಾರಣಗಳು:


- ಪುರುಷ ಜನನಗಳು ಸ್ತ್ರೀ ಜನನಕ್ಕಿಂತ ಹೆಚ್ಚು ಎಂಬ ಲೆಕ್ಕಾಚಾರ.
- ಹೆಣ್ಣು ಶಿಶು ಮರಣ ಪ್ರಮಾಣ ಗಂಡು ಶಿಶು ಮರಣ ಪ್ರಮಾಣಕ್ಕಿಂತ ಹೆಚ್ಚು.
- ಸ್ತ್ರೀ ಮೃತ್ಯು ಪ್ರಮಾಣ ಗಂಡು ಮೃತ್ಯು ಪ್ರಮಾಣಕ್ಕಿಂತ ಹೆಚ್ಚು.
- ಗಂಡು ಮಕ್ಕಳಿಗೆ ಹೆಚ್ಚಿನ ಆಸಕ್ತಿ ಹಾಗೂ ಪ್ರಾಧಾನ್ಯತೆಯ ಕಾರಣ ಸ್ತ್ರೀ ಶಿಶು ಹತ್ಯಾ ಪ್ರಮಾಣವೂ ಹೆಚ್ಚು.

೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಸ್ತ್ರೀ-ಪುರುಷ ಪ್ರಮಾಣವು ೯೨೭. ಆದರೆ ಕೇರಳ ರಾಜ್ಯದಲ್ಲಿ ಇದು ೧೦೩೬.

ಕೇರಳ ರಾಜ್ಯದಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚು. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚು.

ಮಾಹಿತಿ: Census of India, paper2, of 1991.

ಜನಸಂಖ್ಯಾ ಹೆಚ್ಚಳ



ಇದೊಂದು 'ವಿಷ' ಸರಣಿ. ಇದನ್ನು ಎಲ್ಲಿ ಹೇಗೆ ಭೇದಿಸಬಹುದು ಮತ್ತು ಹೇಗೆ ಪರಿಹಾರ ಹುಡುಕಬೇಕು?

ಇದು ನಮ್ಮ ನಿಮ್ಮೆಲ್ಲರ ಮುಂದಿರುವ ಪ್ರಶ್ನೆ.

ಶಿಶು ಉಳಿವು ಮತ್ತು ಸುರಕ್ಷಿತ ತಾಯ್ತನ

ರಾಷ್ಟ್ರೀಯ ಮಟ್ಟದಲ್ಲಿನ ಗುರಿಗಳು:

-ಶಿಶು ಮರಣ ಪ್ರಮಾಣ: (ಪ್ರತಿ೧೦೦೦ ಜೀವಂತ ಹುಟ್ಟಿದ ಮಕ್ಕಳಿಗೆ-)	೧೯೯೨ರಲ್ಲಿ ೮೦ ರಿಂದ ೭೫ಕ್ಕೆ ಮತ್ತು ಕ್ರಿ.ಶ.೨೦೦೦ಕ್ಕೆ ೫೦ಕ್ಕೆ ಕಡಿಮೆಮಾಡುವುದು.
-ಮಕ್ಕಳ (೧ ರಿಂದ ೪ ವರ್ಷ) ಮರಣ ಪ್ರಮಾಣ:	ಪ್ರಸ್ತುತ ೪೧.೨ ರಿಂದ ಕ್ರಿ.ಶ.೨೦೦೦ದ ವೇಳೆಗೆ ೧೦ಕ್ಕಿಂತ ಕಡಿಮೆ ಮಾಡುವುದು.
-ತಾಯಂದಿರ ಮರಣ ಪ್ರಮಾಣ:	ಪ್ರಸ್ತುತ ೪ ರಿಂದ ಕ್ರಿ.ಶ.೨೦೦೦ದ ವೇಳೆಗೆ ೨ಕ್ಕೆ ಇಳಿಸುವುದು.
-ಪೋಲಿಯೋ:	ಕ್ರಿ.ಶ.೨೦೦೦ದ ವೇಳೆಗೆ ಪೂರ್ಣ ನಿರ್ಮೂಲನೆ
-ನವಜಾತ ಶಿಶುವಿನ ಧನುರ್ವಾತ ಮರಣ:	೧೯೯೫ಕ್ಕೆ ಪೂರ್ಣ ತೊಡೆದು ಹಾಕುವುದು.
-ದಢಾರ:	ಪ್ರತಿಶತ ೯೫ರಷ್ಟು ಮರಣ ತಡೆಗಟ್ಟುವುದು.
-ಅತಿಸಾರ ಭೇದಿ:	ಪ್ರತಿಶತ ೭೦ರಷ್ಟು ಮರಣ ತಡೆಗಟ್ಟುವುದು.
-ತೀವ್ರ ಶ್ವಾಸಕೋಶದ ಸೋಂಕು:	ಪ್ರತಿಶತ ೪೦ ರಷ್ಟು ಮರಣ ತಡೆಗಟ್ಟುವುದು
-ಗರ್ಭಿಣಿ ಸ್ತ್ರೀ:	
ಲಸಿಕೆ ರಕ್ಷಣೆ	ಪ್ರತಿಶತ ೧೦೦ ರಷ್ಟು ರಕ್ಷಣೆ
ರಕ್ತಹೀನತೆ	ಪ್ರತಿಬಂಧಕ ಹಾಗೂ ಮೌಖಿಕ ಚಿಕಿತ್ಸೆ (ಶೇ.೧೦೦)
ಪ್ರಸವ ಪೂರ್ವ ತಪಾಸಣೆ:	ಕನಿಷ್ಠ ಪಕ್ಷ ೩ ಬಾರಿ (ಶೇ.೧೦೦)

ಭಾರತ ಸರ್ಕಾರದ ನೆರವಿನಿಂದ ಕರ್ನಾಟಕದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ದೇಶ ಅಭಿವೃದ್ಧಿ ಹೊಂದಲು ಆಗಿರುವ ಅಡಚಣೆ

ದೇಶದ ಒಟ್ಟಾರೆ ಅಭಿವೃದ್ಧಿಗೆ ಮುಖ್ಯ ಅಡಚಣೆ ಬೆಳೆಯುತ್ತಿರುವ ಜನಸಂಖ್ಯೆ.

ಇದರಿಂದಾಗಿ


- ನಿತ್ಯ ಉಪಯೋಗದ ವಸ್ತುಗಳ ಮೇಲಿನ ವೆಚ್ಚ ಹೆಚ್ಚುತ್ತಿದೆ.
- ಉಳಿತಾಯ ನಿರೀಕ್ಷಿಸಿದಂತೆ ಸಾಧ್ಯವಾಗುತ್ತಿಲ್ಲ.
- ಸಂಪನ್ಮೂಲಗಳ ಕೊರತೆ.
- ದೇಶದ ಆರ್ಥಿಕ ಪರಿಸ್ಥಿತಿ ದುರ್ಬಲಗೊಳ್ಳುತ್ತಿದೆ.
- ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದೇಶೀ ವಿನಿಮಯದ ಇಳಿಕೆ.
- ಜನಸಂಖ್ಯೆಯ ಗುಣಮಟ್ಟದಲ್ಲಿ ಇಳಿಕೆ.
- ಜನಸಂಖ್ಯಾ ರಚನೆ (ಜನರ ವಾಸಸ್ಥಳ, ಉದ್ಯೋಗ, ಲಿಂಗ ಪ್ರಮಾಣ, ವೈವಿಧ್ಯತೆಗಳು) ಅಪೇಕ್ಷಿತವಾಗಿಲ್ಲ.

ನಿಮ್ಮ ಮಗುವನ್ನು ಆರು ಮಾರಕ ರೋಗಗಳಿಂದ ರಕ್ಷಿಸಿ ಲಸಿಕೆ ನೀಡುವ ವೇಳಾಪಟ್ಟಿ

ಯಾರಿಗೆ	ಯಾವಾಗ	ಯಾವ ಲಸಿಕೆ	ಎಷ್ಟು ಬಾರಿ
ಹೆಂಗಸರಿಗೆ	ಗರ್ಭಿಣಿ ಎಂದು ತಿಳಿದ ಬಳಿಕ	ಟಿ.ಟಿ.(ಧನುರ್ವಾಯು ನಿರೋಧಕ)	ಎರಡು
ಶಿಶುಗಳಿಗೆ	೬ ವಾರದಿಂದ	ಬಿ.ಸಿ.ಜಿ. (ಕ್ಷಯರೋಗ ನಿರೋದಕ)	ಒಂದು
	-೯ ತಿಂಗಳುಗಳಲ್ಲಿ	ಡಿ.ಟಿ.ಪಿ (ಗಂಟಲು ಮಾರಿ, ನಾಯಿಕೆಮ್ಮು ಧನುರ್ವಾಯು ನಿರೋಧಕ)	ಮೂರು
		ಪೋಲಿಯೋ	ಮೂರು
	೯ ತಿಂಗಳಿಂದ -೧೨ ತಿಂಗಳುಗಳಲ್ಲಿ	ದಢಾರ	ಒಂದು
	೧೬ ತಿಂಗಳುಗಳಿಂದ	ಡಿ.ಪಿ.ಟಿ. (ಬಲವರ್ಧಕ)	ಒಂದು
	೨೪ ತಿಂಗಳುಗಳಲ್ಲಿ	ಪೋಲಿಯೋ(ಬಲವರ್ಧಕ)	ಒಂದು
ಮಕ್ಕಳಿಗೆ	೫ನೇ ವರ್ಷದಲ್ಲಿ	ಟಿ.ಟಿ.(ಗಂಟಲು ಮಾರಿ, ಧನುರ್ವಾಯು)	ಎರಡು
		ಟೈಫಾಯಿಡ್(ವಿಷಮ ಶೀತ ಜ್ವರ ನಿರೋಧಕ)	ಎರಡು
	೧೦ನೇ ವರ್ಷದಲ್ಲಿ	ಟಿ.ಟಿ.(ಧನುರ್ವಾಯು)	ಎರಡು
	೧೬ನೇ ವರ್ಷದಲ್ಲಿ	ಟಿ.ಟಿ.	ಎರಡು

ಲಸಿಕೆ ಕೊಡಿಸುವ ವರಸೆ (ಬಾರಿ)ಗಳ ಮಧ್ಯದ ಅಂತರ ಒಂದು ತಿಂಗಳಿಗಿಂತ ಕಡಿಮೆ ಇರಬಾರದು.

ಕುಟುಂಬದ ಗಾತ್ರ ಮತ್ತು ಜೀವನ ಗುಣಮಟ್ಟ ಇವುಗಳ ನಿಕಟ ಸಂಬಂಧ



ಉತ್ತಮ ಜೀವನ ಗುಣಮಟ್ಟದ ಆಧಾರಗಳು:

ಆಹಾರ, ಆರೋಗ್ಯ, ಶಿಕ್ಷಣ, ವಸತಿ ಸೌಲಭ್ಯ

ಸಾಂಸ್ಕೃತಿಕ/ ಮಾನವೀಯ ಮೌಲ್ಯಗಳು, ಮನರಂಜನಾ ಸೌಲಭ್ಯಗಳು.

ಸಾಮಾಜಿಕ ನ್ಯಾಯ - ಇತ್ಯಾದಿ.

ಶಿಶುವಿಗೆ ದೊರೆಯುವ ಸೌಲಭ್ಯಗಳು - ಒಂದು ಹೋಲಿಕೆ

ವಿವರ	ಅಭಿವೃದ್ಧಿ ಹೊಂದಿರುವ ರಾಷ್ಟ್ರದಲ್ಲಿ ಜನಿಸಿದ ಮಗು	ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರದಲ್ಲಿ ಜನಿಸಿದ ಶಿಶು
೧. ಒಂದು ವರ್ಷ ವಯಸ್ಸಾಗುವ ಮೊದಲು ಮರಣ ಹೊಂದುವುದು	೧೦೦ ಜನನಗಳಲ್ಲಿ ೧ ಮಗು	೫ ಜನನಗಳಲ್ಲಿ ೧ ಮಗು
೨. ಆಯುರ್ಮಾನ	ಸರಾಸರಿ ೭೦ ವರ್ಷಗಳು	ಸರಾಸರಿ ೫೦ ವರ್ಷಗಳು
೩.ಆರೋಗ್ಯ ಕಾರ್ಯ ಕರ್ತರನ್ನು ನೋಡುವ ಹಾಗೂ ಸೇವೆ ಪಡೆಯುವುದು	ಎಲ್ಲ ಮಕ್ಕಳಿಗೂ ಸೇವೆ ಲಭ್ಯ	ಹತ್ತು ಮಕ್ಕಳ ಪೈಕಿ ಒಂದು ಮಗುವಿಗೆ ಲಭ್ಯ
೪. ಶಾಲೆಯಲ್ಲಿ ಶಿಕ್ಷಣ ಸೌಲಭ್ಯ	ಸುಮಾರು ೧೧ ವರ್ಷಗಳು (ಸರಾಸರಿ)	ಸುಮಾರು ೨ ವರ್ಷಗಳು (ಸರಾಸರಿ)

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶಿಶುವಿಗೆ ಮೂಲಭೂತ ಸೌಲಭ್ಯಗಳೂ ಸಾಕಷ್ಟು ಸಿಗುತ್ತಿಲ್ಲ ಎಂಬುದು ಗಮನಾರ್ಹ ಅಂಶ.

ಮಾಹಿತಿ: "My Name is To-day",- Gabriula Mistral-TALC publication London.

ಅಂಧತ್ವ ನಿಯಂತ್ರಣ

ಇರುಳುಗಣ್ಣು ಮತ್ತು ಕುರುಡುತನ ತಡೆಗಟ್ಟುವುದು:

ಸಾಮಾನ್ಯವಾಗಿ ಚಿಕ್ಕಮಕ್ಕಳಲ್ಲಿ 'ಎ' ಅನ್ನಾಂಗದ ಕೊರತೆಯಿಂದ ಇರುಳುಗಣ್ಣು ತೊಂದರೆ ಆಗುವುದು. ಕಣ್ಣಿನ ಬಿಳಿಭಾಗದ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಾಣುತ್ತವೆ. ಕ್ರಮೇಣ ರಾತ್ರಿಯಲ್ಲಿ ಕಣ್ಣು ಕಾಣಿಸುವುದಿಲ್ಲ. ನಂತರ ಪೂರ್ಣ ಕುರುಡುತನ ಬರುವುದು.

ತಡೆಗಟ್ಟುವುದು ಹೇಗೆ ?

- ಗರ್ಭಿಣಿಯಾದಾಗ 'ಎ' ಅನ್ನಾಂಗ ಹೆಚ್ಚು ಇರುವ ಪಾಲಕ್, ಮೆಂತೆ, ರಾಜಗಿರಿ, ಹರಿವೆ ಮೊದಲಾದ ಸೊಪ್ಪುಗಳನ್ನು ಸ್ತ್ರೀಯರು ಬಳಸಬೇಕು. ಹಳದಿ ಬಣ್ಣದ ಹಣ್ಣು ಸೇವಿಸಬೇಕು.
- ಜನನವಾದ ೫-೬ ಗಂಟೆಗಳ ನಂತರದಿಂದ ತಾಯಿಯು ಮಗುವಿಗೆ ಎದೆ ಹಾಲು ಕುಡಿಸಲು ಆರಂಭಿಸಬೇಕು.
- ನಾಲ್ಕು ತಿಂಗಳು ತುಂಬಿದ ನಂತರ ಶಿಶುವಿಗೆ ಎದೆ ಹಾಲಿನ ಜೊತೆಗೆ ಅರೆಗಟ್ಟಿ ಆಹಾರವನ್ನು ಕೊಡಬೇಕು.
- ೧ ರಿಂದ ೫ ವರ್ಷದ ಮಕ್ಕಳಿಗೆ ೬ ತಿಂಗಳುಗಳಿಗೆ ಒಮ್ಮೆ ವಿಟಮಿನ್ 'ಎ' ಅನ್ನಾಂಗ ಪಾಕವನ್ನು ಕುಡಿಸಬೇಕು.

ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ:

ವಯಸ್ಸಾದವರಲ್ಲಿ ಕಣ್ಣಿಗೆ ಪೊರೆಬಂದು ಪಾರ್ಶ್ವ ಅಂಧತ್ವಕ್ಕೆ ಕಾರಣವಾಗಬಹುದು. ನೇತ್ರ ಚಿಕಿತ್ಸಾ ತಜ್ಞರಲ್ಲಿ ತಪಾಸಣೆ ನಡೆಸಿ ಸೂಕ್ತ ಶಸ್ತ್ರಚಿಕಿತ್ಸೆ ಮಾಡಿಸಬಹುದು. ಸಂಚಾರಿ ನೇತ್ರ ಶಸ್ತ್ರಚಿಕಿತ್ಸಾ ತಂಡಗಳ ಮೂಲಕ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳಲ್ಲಿ ಸಹ ಈ ಕಾರ್ಯ ನಡೆಸಲಾಗುತ್ತಿದೆ.

ಭಾರತದಲ್ಲಿ ಶಿಶು ಮರಣ ಪ್ರಮಾಣ ಹೆಚ್ಚಾಗಿರಲು ಕಾರಣಗಳು

ಜೈವಿಕ ಕಾರಣಗಳು:

- ತಾಯಿಯ ವಯಸ್ಸು.
- ಜನನದ ಕ್ರಮ
- ಅವಳಿ, ತ್ರಿವಳಿ ಮಕ್ಕಳ ಜನನ.
- ಕುಟುಂಬದ ಗಾತ್ರ (ದೊಡ್ಡ ಕುಟುಂಬ).

ಸಾಮಾಜಿಕ ಹಾಗೂ ಇತರ ಅಂಶಗಳು:

- ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ಸ್ತನ್ಯಪಾನ ನಿಲ್ಲಿಸುವುದು.
- ಶಿಶುಪೋಷಣೆಯ ಬಗ್ಗೆ ಅಜ್ಞಾನ.
- ಅತಿಯಾಗಿ ಔಷಧ ಕೊಡುವುದು ಅಥವಾ ಕೊಡದೇ ಇರುವುದು.
- ಮೂಢನಂಬಿಕೆಗಳು ಹಾಗೂ ಕಂದಾಚಾರಗಳಿಗೇ ಶರಣಾಗುವುದು.
- ಪರಿಸರ ಮಾಲಿನ್ಯ.
- ರೋಗ ನಿರೋಧಕ ಮುಂಜಾಗರೂಕ ಕ್ರಮಗಳ ಬಗ್ಗೆ ಅಜ್ಞಾನ.

ಜನಸಂಖ್ಯಾ ಶಿಕ್ಷಣದ ಪರಿಕಲ್ಪನೆ

ವಿಷಯ	ಪರಿಕಲ್ಪನೆಗಳು
೧. ಕುಟುಂಬದ ಗಾತ್ರ ಹಾಗೂ ಕುಟುಂಬ ಕಲ್ಯಾಣ:	–ಅಗತ್ಯಗಳ ಪೂರೈಕೆ ಉತ್ತಮ ಜೀವನ ಗುಣಮಟ್ಟ ಕುಟುಂಬದ ಗಾತ್ರ
೨. ವಿಳಂಬಿತ ವಿವಾಹ:	– ರಾಷ್ಟ್ರೀಯ ಗುರಿ ವಿಳಂಬಿತ ವಿವಾಹದ ಅನುಕೂಲತೆಗಳು.
೩. ಜವಾಬ್ದಾರಿಯುತ ಪಾಲಕತ್ವ:	– ಹದಿಹರೆಯದವರ ಸಮಸ್ಯೆಗಳು ಜನನೇಂದ್ರಿಯಗಳ ಪರಿಚಯ ಸಂತಾನೋತ್ಪತ್ತಿ ತಾಯಿ ಹಾಗೂ ಮಗುವಿನ ಆರೋಗ್ಯ ಪಾಲನೆ.
೪. ಜನಸಂಖ್ಯಾ ಬದಲಾವಣೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ:	– ಜನನ ಹಾಗೂ ಮರಣ ಪ್ರಮಾಣ. ಕುಟುಂಬದ ಗಾತ್ರ ಬೆಳವಣಿಗೆ ಹಾಗೂ ಅವಲಂಬಿತರ ಪ್ರಮಾಣ ಜನಗಣತಿ ಜೀವಿಸ್ಥಿತಿಯಲ್ಲಿ ಅಸಮತೋಲನ.
೫. ಜನಸಂಖ್ಯೆಯ ಸಂಬಂಧವಾದ ನಂಬಿಕೆಗಳು ಮತ್ತು ಮೌಲ್ಯಗಳು:	– ಹಿಂದಿನ ನಂಬಿಕೆಗಳು ಹಾಗೂ ಮೌಲ್ಯಗಳು. ಈಗಿನ ಮೌಲ್ಯಗಳು. ಇವುಗಳ ಸಂಘರ್ಷ.
೬. ಭಿನ್ನ ಲಿಂಗಗಳಲ್ಲಿ ಸಮಾನತೆ:	– ಲಿಂಗ ಪ್ರಮಾಣ ಸ್ತ್ರೀಯರ ಸ್ಥಾನ–ಮಾನ.... ಇತ್ಯಾದಿ.
೭. ವೃದ್ಧರ ಸಮಸ್ಯೆಗಳು:	– ಪುರುಷ ಹಾಗೂ ಸ್ತ್ರೀಯರ ಆಯುರ್ಮಾನ ವೃದ್ಧಾಪ್ಯ ಸಮಸ್ಯೆಗಳು...... ಇತ್ಯಾದಿ.

ಮರಣ ಪ್ರಮಾಣ ಭಾರತದಲ್ಲಿ ಹೆಚ್ಚಿನ ಮಟ್ಟದಲ್ಲಿರಲು ಕಾರಣಗಳು

೧. ಅಪೌಷ್ಟಿಕತೆ.

೨. ಸಾಂಕ್ರಾಮಿಕ ವ್ಯಾಧಿಗಳ ಬಗ್ಗೆ ಇರುವ ಅಜಾಗರೂಕತೆ.

೩. ಪರಿಸರದಲ್ಲಿನ ವ್ಯತ್ಯಯ.

೪. ವೈದ್ಯಕೀಯ ಸೌಲಭ್ಯಗಳ ಅಸಮರ್ಪಕ ಬಳಕೆ.

೫. ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು.

೬. ಪ್ರಾಥಮಿಕ ವೈದ್ಯಕೀಯ ನೆರವು ನೀಡಲು ಸಾಧ್ಯವಾಗದಿರುವುದು. (ಅನಕ್ಷರತೆ ಒಂದು ಕಾರಣ).

ಕುಟುಂಬ ಕಲ್ಯಾಣ - ಒಂದು ವಿವರಣೆ

ಅ. ಜನನ ನಿಯಂತ್ರಣ.

ಸ್ವಯಂ ಪ್ರೇರಣೆಯಿಂದ ಚಿಕ್ಕ ಕುಟುಂಬ ಹೊಂದಲು ಬಯಸಿ ತಾತ್ಕಾಲಿಕ ಅಥವಾ ಶಾಶ್ವತ ನಿಯಂತ್ರಣ ವಿಧಾನ ಅನುಸರಿಸುವುದು.

ಆ. ಬಂಜೆತನ ನಿಯಂತ್ರಣ.

ವಿವಾಹವಾದ ಪ್ರತಿ ದಂಪತಿಗಳಿಗೂ ಮಗುವನ್ನು ಪಡೆಯಬೇಕೆಂಬ ಆಸೆ ಸಹಜವಾದದ್ದು ವೈದ್ಯಕೀಯವಾಗಿ ಸ್ತ್ರೀ ಅಥವಾ ಪುರುಷರಲ್ಲಿ ತೊಂದರೆ ಇದ್ದು ಅವರು ಮಗುವನ್ನು ಪಡೆಯಲಾರದಂಥ ಸಂದರ್ಭದಲ್ಲಿ ಸೂಕ್ತ ವೈದ್ಯಕೀಯ ನೆರವು ನೀಡುವುದು.

ಇ. ವಿವಾಹದ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನ.


ಯುವಕ-ಯುವತಿಯರಿಗೆ ವಿವಾಹದ ಬಗ್ಗೆ ಪರಿಕಲ್ಪನೆ. ಜವಾಬ್ದಾರಿಯುತ ಪಾಲಕತ್ವದ ಬಗ್ಗೆ ವಿವರಣೆ. ಚಿಕ್ಕ ಸಂಸಾರದ ಕಲ್ಪನೆ ಬಗ್ಗೆ ಅರಿವು ಮೂಡಿಸುವುದು.

ಈ. ಆನುವಂಶಿಕ ರೋಗಗಳ ತಡೆ.

ವಂಶಪಾರಂಪರ್ಯವಾಗಿ ಬರಬಹುದಾದಂಥ ರೋಗಗಳನ್ನು ತಡೆಗಟ್ಟುವ ಬಗ್ಗೆ ದಂಪತಿಗಳಿಗೆ ಸೂಕ್ತ ಮಾರ್ಗದರ್ಶನ, ಮಕ್ಕಳನ್ನು ದತ್ತು ತೆಗೆದುಕೊಳ್ಳುವುದು.

- ಇತ್ಯಾದಿ.

ಉತ್ತಮ ಜೀವನಮಟ್ಟದ ಆಧಾರಗಳು



ಮಾಹಿತಿ: Population Education Newsletter and Forum êò.34,1991 UNESCO, Bangkok

ಕುಟುಂಬ ಕಲ್ಯಾಣ ಸೇವೆಗಳು

ಉತ್ತಮ ಹಾಗೂ ಪರಿಣಾಮಕಾರಿ ಜನನ ನಿಯಂತ್ರಣ ಸಾಧನ

- ವೈಜ್ಞಾನಿಕ ಹಾಗೂ ಸ್ವಾಸ್ಥ್ಯದಿಂದ ಕೂಡಿರಬೇಕು.
- ಸುಲಭವಾಗಿ ಸಿಗುವಂತಿರಬೇಕು.
- ಎಲ್ಲರೂ ಒಪ್ಪಿಕೊಳ್ಳುವಂತಿರಬೇಕು.
- ಕಡಿಮೆ ಬೆಲೆಗೆ ದೊರೆಯುವಂತಿರಬೇಕು (ಉಚಿತವಾಗಿದ್ದರೆ ಉತ್ತಮ)
- ಉಪಯೋಗಿಸಲು ಸರಳವಾಗಿರಬೇಕು.
- ಪುನಃ ಪುನಃ ಉಪಯೋಗಿಸಲು ಸುಲಭವಾಗಿ ದೊರೆಯಬೇಕು.
- ಪರಿಣಾಮಕಾರಿಯಾಗಿ ಗರ್ಭ ತಡೆಗಟ್ಟುವಂತಿರಬೇಕು.
- ನಿರಪಾಯಕಾರಿಯಾಗಿರಬೇಕು............. ಇತ್ಯಾದಿ.

ವಿವಿಧ ಜನರ ದೇಹದ ಬೆಳವಣಿಗೆ, ದೇಹದ ರಚನೆ, ಅಭಿರುಚಿಗಳಿಗೆ ಒಪ್ಪಿಗೆಯಾಗಬಲ್ಲ ಜನನ ನಿಯಂತ್ರಣ ಸಾಧನ ಅಪೇಕ್ಷಣೀಯ.

ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ ದಲ್ಲಿ ಆಯ್ಕೆ ದಂಪತಿಗಳಿಗೆ ಸೇರಿದೆ.

ಜನಸಂಖ್ಯಾ ಸಮಸ್ಯೆಗಳನ್ನು ಎದುರಿಸಲು ಉಂಟಾದ ತೊಡಕುಗಳು.

೧. ಸೋಮಾರಿತನ.

೨. ವೈಯಕ್ತಿಕ ಜವಾಬ್ದಾರಿ ಹೊರಲು ಬೇಕಾದ ಜವಾಬ್ದಾರಿಯುತ ಮನೋಭಾವದ ಕೊರತೆ.

೩. ವೈಯಕ್ತಿಕ ಹಾಗೂ 'ಸಾಮಾಜಿಕ ಶುಭ್ರತೆ'ಯ ಕೊರತೆ.

೪. ಅಜ್ಞಾನ, ಮೂಢನಂಬಿಕೆ, ಅರ್ಥಹೀನ ನಂಬಿಕೆ ಹಾಗೂ ಅಭ್ಯಾಸಗಳು.

೫. ಸಂಪನ್ಮೂಲಗಳ ಅಪವ್ಯಯ.

೬. ಆರ್ಥಿಕ ಬೆಳವಣಿಗೆಯ ಬಗ್ಗೆ ಅನಾಸಕ್ತಿ.

೭. ಸಾಮಾಜಿಕ ಒಳಿತಿಗಾಗಿ ನಿಸ್ವಾರ್ಥತೆಯ ಕೊರತೆ.

೮. ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕಾಗಿ ದುಡಿಯುವ ನಿಸ್ವಾರ್ಥ ಮನೋಭಾವದ ಕೊರತೆ.

ಕುಟುಂಬ ಕಲ್ಯಾಣ ಏಕೆ?

ಕುಟುಂಬದ ಸಮಗ್ರ ಕ್ಷೇಮ ಯೋಜನೆ ಕುಟುಂಬ ಕಲ್ಯಾಣ.

ವ್ಯಕ್ತಿಯ ಕಲ್ಯಾಣಕ್ಕಾಗಿ: ವೈವಾಹಿಕ ಜೀವನದ ಪೂರ್ಣ ಸುಖ

- ಬಯಸಿದಾಗ ಮಾತ್ರ ಮಕ್ಕಳು.

ಕುಟುಂಬ ಕಲ್ಯಾಣಕ್ಕಾಗಿ: ಮಕ್ಕಳಿಗೆ ಉತ್ತಮ ಆಹಾರ, ವಸತಿ, ಬಟ್ಟೆ ಮತ್ತು ಅಪೇಕ್ಷಿತ ಶಿಕ್ಷಣ.

- ಪ್ರೀತಿ ವಾತ್ಸಲ್ಯದಿಂದ ಕುಟುಂಬದ ಸದಸ್ಯರನ್ನು ಬೆಳೆಸಿ, ಉತ್ತಮ ನಾಗರಿಕರನ್ನಾಗಿ ಮಾಡಲು ಅವಕಾಶ. ಕುಟುಂಬದ ಆರ್ಥಿಕ ಸುಧಾರಣೆ. ಕುಟುಂಬದ ಸದಸ್ಯರ ಆರೋಗ್ಯ ರಕ್ಷಣೆ.

ರಾಷ್ಟ್ರದ ಕಲ್ಯಾಣಕ್ಕಾಗಿ: ಪ್ರತಿಯೊಬ್ಬ ಪ್ರಜೆಯ ಉತ್ತಮ ಬಾಳ್ವೆಗೆ ಅವಕಾಶ. ನಾಗರಿಕ ಸೌಲಭ್ಯಗಳು ಎಲ್ಲರಿಗೂ ದೊರೆಯಲು ದೈಹಿಕ ಹಾಗೂ ಮಾನಸಿಕ ಸದೃಢ ಜನ ಸಂಪತ್ತು. ಶಾಂತಿಯುತ ವಾದ ಸಹಬಾಳ್ವೆ.

ಜನಸಂಖ್ಯಾ ಬೆಳವಣಿಗೆಯಿಂದ ಉದ್ಭವಿಸುತ್ತಿರುವ ಸಮಸ್ಯೆಗಳು

೧. ಆಹಾರ, ಕುಡಿಯುವ ನೀರು, ಬಟ್ಟೆ ಹಾಗೂ ವಸತಿಯ ಕೊರತೆ.

೨. ಇತರ ಅವಶ್ಯಕ ಸಾಮಗ್ರಿಗಳ ಕೊರತೆ.

೩. ಸಂಪರ್ಕ ಸಾಧನಗಳು, ಶಾಲೆಗಳು, ಆಸ್ಪತ್ರೆಗಳು ಮತ್ತು ಮನರಂಜನಾ ಸ್ಥಳಗಳ ಕೊರತೆ.

೪. ಸಸ್ಯ ಸಂಪತ್ತಿನ ನಾಶ.

೫. ಗೃಹ ನಿರ್ಮಾಣ ಹಾಗೂ ಕಾರ್ಖಾನೆಗಳ ಸ್ಥಾಪನೆಗೆ ವ್ಯವಸಾಯದ ಭೂಮಿಯ ಬಳಕೆ.

೬. ಹಳ್ಳಿಯಿಂದ ಪಟ್ಟಣದತ್ತ ಉದ್ಯೋಗಾಕಾಂಕ್ಷಿ ಜನರ ಹೆಚ್ಚು ವಲಸೆ. ನಗರಗಳಲ್ಲಿ ಸಾರ್ವಜನಿಕ ಸೌಲಭ್ಯಗಳ ಕೊರತೆ.

೭. ವಾಯು, ಜಲ ಹಾಗೂ ಶಬ್ದಮಾಲಿನ್ಯ ಅಲ್ಲದೆ ಅಣುವಿಕಿರಣ ಮಾಲಿನ್ಯ.

೮. ಹೆಚ್ಚುತ್ತಿರುವ ಅನಕ್ಷರಸ್ಥರು.

೯. ಸಂಪನ್ಮೂಲ ಮತ್ತು ವಿವಿಧ ಶಕ್ತಿಗಳ ಮಿತಿ ಇಲ್ಲದ ಬಳಕೆ ಮತ್ತು ಹೊಸ ರೀತಿಯ ಶಕ್ತಿಗಳಿಗಾಗಿ ಶೋಧನೆಯ ಪ್ರಯತ್ನದ ಕೊರತೆ.

ನಮ್ಮೆಲ್ಲರ ಗಮನ ಇತ್ತ ಕಡೆಗೆ ಇರಲಿ

ರಾಷ್ಟ್ರೀಯ ಯೋಜನಾ ಆಯೋಗ ಜನಸಂಖ್ಯಾ ಸ್ಥಿತಿಯನ್ನು ಕುರಿತು ಚರ್ಚಿಸಿ, ೧೯೯೬ರ ಹೊತ್ತಿಗೆ ಕುಟುಂಬ ಕಲ್ಯಾಣ ಪ್ರಗತಿ ಅಪೇಕ್ಷಿತ ಮಟ್ಟಕ್ಕೆ ಏರಬೇಕೆಂದು ಸೂಚಿಸಿದೆ.

ಉದ್ದೇಶಿತ ಗುರಿಗಳು.

- ಪ್ರತಿ ೧೦೦೦ ಜನಸಂಖ್ಯೆಗೆ ಜನನ ಪ್ರಮಾಣ ೨೧ಕ್ಕೆ ಇಳಿಯಬೇಕು.
- ಪ್ರತಿ ೧೦೦೦ ಜನಸಂಖ್ಯೆಗೆ ಮರಣ ಪ್ರಮಾಣ ೯ಕ್ಕೆ ಇಳಿಯಬೇಕು.
- ಪ್ರತಿ ೧೦೦೦ ಜನಸಂಖ್ಯೆಗೆ ಶಿಶು ಮರಣ ಪ್ರಮಾಣ ೬೦ಕ್ಕೆ ಇಳಿಯಬೇಕು.
- ಆಯುರ್ಮಾನವು ಸರಾಸರಿ ೬೪ ವರ್ಷಗಳಿಗೆ ಹೆಚ್ಚಬೇಕು.
- ಶೇ.೬೦ ಮಂದಿ ಅರ್ಹದಂಪತಿಗಳಿಗೆ ಎಲ್ಲಾ ಕುಟುಂಬ ಕಲ್ಯಾಣ ಸೇವೆಗಳೂ ಲಭ್ಯವಾಗಬೇಕು.
- ಒಟ್ಟಾರೆ ಜನನ ಪ್ರಮಾಣವು 'ಒಂದು' ಆಗಬೇಕು. ಸರಾಸರಿ ಲೆಕ್ಕದಲ್ಲಿ ಆಗ ಒಬ್ಬ ಸ್ತ್ರೀ ಒಂದೇ ಹೆಣ್ಣು ಮಗುವನ್ನು ಪಡೆಯುತ್ತಾಳೆ.

ಈಗಿನ ಅಂದಾಜಿನಂತೆ ಸರಾಸರಿ ೧೩ ಕೋಟಿ ಅರ್ಹದಂಪತಿಗಳಿಗೆ ಕುಟುಂಬ ಕಲ್ಯಾಣ ಸೇವೆ ಒದಗಿಸಬೇಕಾಗಿದೆ. ಸರಾಸರಿ (ಪ್ರತಿಶತ)೩೦ ರಷ್ಟು ಸಾಧನೆಯಾಗಿದೆ. ಅಪೇಕ್ಷಿತ ಗುರಿಸಾಧನೆಗೆ ಎಲ್ಲರ ಪ್ರಾಮಾಣಿಕ ಸೇವೆ ಅಗತ್ಯ.

ಭಾರತದಲ್ಲಿ ಜನಸಂಖ್ಯಾ ಬೆಳವಣಿಗೆಯ ಸ್ಥಿತಿ

ಭಾರತದ ಜನಸಂಖ್ಯೆ ವಿಶ್ವದ ಜನಸಂಖ್ಯೆಯ ಶೇಕಡಾ ೧೬ರಷ್ಟು ಇದೆ. ಆದರೆ ವಿಶ್ವದ ಭೂಭಾಗದ ಶೇಕಡಾ ೨.೪ರಷ್ಟು ಮಾತ್ರ ಭಾರತದ ನೆಲ. ಅಮೆರಿಕಾದ ಜನಸಂಖ್ಯೆ ವಿಶ್ವದ ಜನಸಂಖ್ಯೆಯ ಶೇ.೬ ರಷ್ಟು ಇದ್ದರೂ ಸಹ ಒಟ್ಟು ಭೂಪ್ರದೇಶ ಶೇ.೭ರಷ್ಟು ಆ ರಾಷ್ಟ್ರಕ್ಕೆ ಸೇರಿದ್ದಾಗಿದೆ. ಈ ಹೋಲಿಕೆಯಿಂದ ಕಂಡುಬರುವ ಅಂಶ ಇದು.

ವಿಶ್ವದ ಕಡಿಮೆ ಭೂಪ್ರದೇಶದಲ್ಲಿ ವಿಶ್ವದ ಅತಿ ಹೆಚ್ಚು ಜನಸಂಖ್ಯೆಯ ಎರಡನೆಯ ಸ್ಥಾನದಲ್ಲಿರುವ ಭಾರತ ತನ್ನ ಜನಸಂಖ್ಯೆಯನ್ನು ಮಿತಿಗೊಳಿಸಿಕೊಳ್ಳಲೇಬೇಕಾಗಿದೆ.

ಭಾರತದಲ್ಲಿ ಪ್ರತಿ	೧ ೧/೨ ಸೆಕೆಂಡಿಗೆ ೧ ಜನನ
	೧ ನಿಮಿಷಕ್ಕೆ ೪೦ ಮಕ್ಕಳು
	೧ ಗಂಟೆಗೆ ೨,೪೦೦ ಮಕ್ಕಳು
	೧ ದಿನಕ್ಕೆ ೫೭, ೬೦೦ ಮಕ್ಕಳು
	ಜನಿಸುತ್ತವೆ.

ಮಾಹಿತಿ: Centre Calling- Dec 1991 Min of H & F.W.

ಜನಸಂಖ್ಯಾ ಶಿಕ್ಷಣದ ವಿವಿಧ ವಿಷಯಗಳು

ಅ. ಕುಟುಂಬದ ಗಾತ್ರ ಹಾಗೂ ಕುಟುಂಬ ಕಲ್ಯಾಣ

ಆ. ವಿಳಂಬಿತ ವಿವಾಹ.

ಇ. ಜವಾಬ್ದಾರಿಯುತ ಪಾಲಕತ್ವ.

ಈ. ಜನಸಂಖ್ಯಾ ಬದಲಾವಣೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ.

ಉ. ಜನಸಂಖ್ಯೆಗೆ ಸಂಬಂಧಿಸಿದ ನಂಬಿಕೆಗಳು, ಮೌಲ್ಯಗಳು.

ಊ. ಸ್ತ್ರೀಯರ ಸ್ಥಾನ-ಮಾನ

ಹಾಗೂ

೧. ಹದಿಹರೆಯದವರ ಸಮಸ್ಯೆಗಳು.

೨. ಲೈಂಗಿಕವಾಗಿ ಹರಡುವ ಕಾಯಿಲೆಗಳು.

೩. ನಗರಿಕರಣ

೪. ವೃದ್ಧರ ಸಮಸ್ಯೆಗಳು.

ವಿಶ್ವದ ಜನಸಂಖ್ಯಾ ಬೆಳವಣಿಗೆಯ ಪ್ರವೃತ್ತಿ

ವಿಶ್ವದ ಜನಸಂಖ್ಯೆ ಹೆಚ್ಚಾಗುತ್ತಿರುವುದು ಗಮನಾರ್ಹ ಅಂಶ. ಆದರೆ ಜನಸಂಖ್ಯೆ ಎಲ್ಲಾ ದೇಶಗಳಲ್ಲೂ ಒಂದೇ ಪ್ರಮಾಣದಲ್ಲಿ ಏರುತ್ತಿಲ್ಲ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯೆಯ ಬೆಳವಣಿಗೆ ಅತಿ ವೇಗವಾಗಿದೆ.

ವರ್ಷ	ಶೇಕಡಾವಾರು ಜನಸಂಖ್ಯೆ ಅಭಿವೃದ್ಧಿಯಾದ ರಾಷ್ಟ್ರಗಳು	ಅಭಿವೃದ್ಧಿ ಪರ ರಾಷ್ಟ್ರಗಳು
ಕ್ರಿ.ಶ.೧೮೫೦	೨೭೭	೭೨.೩
೧೯೦೦	೩೪೭	೬೫.೩
೧೯೫೦	೩೪೫	೬೫.೫
೨೦೦೦(ಪ್ರಕ್ಷೇಪಣೆ)	೭೭.೪	೭೭.೬

ಈ ಶತಮಾನದ ಅಂತ್ಯದ ವೇಳೆಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಜನಸಂಖ್ಯಾ ಅಂದಾಜು ೫೦೪೦ ದಶಲಕ್ಷಗಳಾಗಬಹುದೆಂದು ಊಹಿಸಲಾಗಿದೆ. ಆಗ ಅಭಿವೃದ್ಧಿ ಹೊಂದಿರುವ ರಾಷ್ಟ್ರದಲ್ಲಿ ಕೇವಲ ೧೪೫೦ ದಶಲಕ್ಷ ಜನಸಂಖ್ಯೆ ಇರಬಹುದೆಂಬ ಅಂದಾಜು ಇದೆ.

ಮಾಹಿತಿ: ವಿಶ್ವಜನಸಂಖ್ಯಾ ಮಾಹಿತಿ ಕೇಂದ್ರ, ವಾಷಿಂಗ್‌ಟನ್ ೧೯೭೨ರ ವರದಿ.

ಜನಸಂಖ್ಯಾ ಬದಲಾವಣೆಯ ಮೂಲ ಅಂಶಗಳು

ಜನನಗಳು, ಮರಣಗಳು ಮತ್ತು ವಲಸೆ

ಕಚ್ಚಾ ಜನನಪ್ರಮಾಣ : $\frac{\text{ಒಂದು ವರ್ಷದಲ್ಲಿನ ಒಟ್ಟು ಜನನಗಳು}}{\text{ಮಧ್ಯವಾರ್ಷಿಕ ಜನಸಂಖ್ಯೆ}}$ x ೧೦೦೦

ಕಚ್ಚಾ ಮರಣ ಪ್ರಮಾಣ : $\frac{\text{ಒಂದು ವರ್ಷದಲ್ಲಿನ ಒಟ್ಟು ಮರಣಗಳು}}{\text{ಮಧ್ಯವಾರ್ಷಿಕ ಜನಸಂಖ್ಯೆ}}$ x ೧೦೦೦

ಒಟ್ಟು ಚಲನೆ ಪ್ರಮಾಣ : $\frac{\text{ಅಂತರಿಕ ವಲಸೆ ಸಂಖ್ಯೆ-ಬಾಹ್ಯವಲಸೆ ಸಂಖ್ಯೆ}}{\text{ಮಧ್ಯವಾರ್ಷಿಕ ಜನಸಂಖ್ಯೆ}}$ x ೧೦೦೦

ಜನಸಂಖ್ಯಾ ಬೆಳವಣಿಗೆಯ ಸಾಮಾನ್ಯ ಪ್ರವೃತ್ತಿ

ಜನಸಂಖ್ಯೆಯ ಬೆಳವಣಿಗೆಯನ್ನು ಸಾಮಾನ್ಯವಾಗಿ ಅತಿವೇಗ, ಶೂನ್ಯ ಮತ್ತು ಋಣಾತ್ಮಕ ಎಂದು ಗುರುತಿಸಲಾಗುತ್ತಿದೆ. ಚೀನಾದಲ್ಲಿ ಜನಸಂಖ್ಯೆ ಹೆಚ್ಚು, ಆದರೆ ಭಾರತಕ್ಕೆ ಹೋಲಿಸಿದಲ್ಲಿ ಜನಸಂಖ್ಯೆ ಬೆಳವಣಿಗೆಯ ವೇಗ ಕಡಿಮೆ.

ಅತಿ ವೇಗ: ಜನನ ಪ್ರಮಾಣ ಅತಿ ಹೆಚ್ಚು; ಮರಣ ಪ್ರಮಾಣ ಅತಿ ಕಡಿಮೆ, ಜನಸಂಖ್ಯಾ ಏರಿಕೆಯೂ ಅತಿ ಹೆಚ್ಚು.

ಶೂನ್ಯ: ಜನನ ಪ್ರಮಾಣ= ಮರಣ ಪ್ರಮಾಣ (೧೯೦೧-೧೧ರಲ್ಲಿ ಭಾರತದ ಸ್ಥಿತಿ) ಜನಸಂಖ್ಯಾ ಬೆಳವಣಿಗೆ ಇಲ್ಲ.

ಋಣಾತ್ಮಕ: ಜನನ ಪ್ರಮಾಣ ಅತಿ ಕಡಿಮೆ, ಮರಣ ಪ್ರಮಾಣ ಅತಿ ಕಡಿಮೆ, ಜನಸಂಖ್ಯೆಯಲ್ಲಿ ಇಳಿಮುಖ. (ಇಂದಿನ ಸ್ವೀಡನ್ನಲ್ಲಿ ಈ ಸ್ಥಿತಿ ಕಾಣಬರುತ್ತಿದೆ)

ಏಡ್ಸ್

AIDS- Acquired Immune Deficiency Syndrome.

ಇದು ಮನುಕುಲವನ್ನೇ ತಲ್ಲಣಗೊಳಿಸುತ್ತಿರುವ ಭಯಾನಕ ರೋಗ.

ಏಡ್ಸ್ ಎಂದರೇನು?

ಪ್ರತಿರೋಧ ಶಕ್ತಿಯನ್ನು ಕುಂದಿಸುವ ರೋಗ. ಹೆಚ್. ಐ.ವಿ ಎಂಬ ವೈರಸ್ (ರೋಗಾಣುಗಳು) ನಿಂದ ಈ ರೋಗ ಹರಡುವುದು. ಈ ರೋಗ ತಗುಲಿದ ವ್ಯಕ್ತಿ ರೋಗ ನಿರೋಧಕಶಕ್ತಿ ಕಳೆದುಕೊಳ್ಳುವನು(ಳು).

ಏಡ್ಸ್ - ಮೂಲ

ಮೊದಲ ಬಾರಿಗೆ ೧೯೮೦-೮೧ರಲ್ಲಿ ಸಲಿಂಗ ಕಾಮಿಗಳಲ್ಲಿ ಈ ರೋಗ ಕಂಡು ಬಂತು. ೧೯೮೭ರ ಹೊತ್ತಿಗೆ ವಿಶ್ವದಲ್ಲಿನ ೭೧ ರಾಷ್ಟ್ರಗಳಲ್ಲಿ ೨೯ ಸಾವಿರ ಏಡ್ಸ್ ರೋಗಿಗಳಿದ್ದರು ಎಂದು ಅಂದಾಜು ಮಾಡಲಾಗಿದೆ.

ಪರೀಕ್ಷಾ ಕ್ರಮ

ಎಲಿಸಾ (ELISA) ಎಂಬ ಪರೀಕ್ಷಾ ವಿಧಾನದಿಂದ ಈ ರೋಗ ಪತ್ತೆ ಹಚ್ಚಬಹುದು. ಈ ಎಲೆಕ್ಟ್ರಾನಿಕ್ ಉಪಕರಣವು ಮನುಷ್ಯ ದೇಹದಲ್ಲಿನ ರೋಗ ನಿರೋಧಕ ಶಕ್ತಿ ಕುಂದಿಸುವ ವಿಷಾಣುವನ್ನು (HIV)ಗುರುತಿಸುತ್ತದೆ.

ಏಡ್ಸ್ ತಡೆಯುವುದು

ಪರಿಚಯವಿಲ್ಲದವರ ಸೂಕ್ತ ತಪಾಸಣೆ ಇಲ್ಲದೆ ರಕ್ತಪಡೆಯಬಾರದು. ಬಳಸಿದ ಸೂಜಿಗಳನ್ನು ಇಂಜೆಕ್ಷನ್ ತೆಗೆದುಕೊಳ್ಳು ಬಳಸಬಾರದು. ಅಪರಿಚಿತ ವ್ಯಕ್ತಗಳೊಂದಿಗೆ ಲೈಂಗಿಕ ಸಂಪರ್ಕ ಮಾಡಬಾರದು. ಮಾದಕ ದ್ರವ್ಯಗಳನ್ನು ಬಳಸುವವರು ರಕ್ತನಾಳದ ಮೂಲಕ ದ್ರವ್ಯ ಬಳಸಬಾರದು. ಮಾದಕ ದ್ರವ್ಯ ಬಳಸುವುದನ್ನೇ ಬಿಡುವುದು ಉತ್ತಮ - ಇತ್ಯಾದಿ.

ಜನಸಂಖ್ಯೆ ಲೆಕ್ಕಾಚಾರ

ಜನಸಂಖ್ಯೆ ಶಾಸ್ತ್ರದಲ್ಲಿ ಸಾಮಾನ್ಯವಾಗಿ ಬಳಸುವ ಘಟಕ 'ಮಿಲಿಯನ್'

ಒಂದು ಲಕ್ಷ = ೧,೦೦,೦೦೦

ಮಿಲಿಯನ್= $೧೦^{೬}$ = ೧,೦೦೦,೦೦೦ = ೧೦ ಲಕ್ಷ (ದಶಲಕ್ಷ)

ಕೋಟಿ = $೧೦^{೭}$ = ೧೦,೦೦೦,೦೦೦=೧೦ಮಿಲಿಯನ್ (೧೦೦ ಲಕ್ಷ)

ಬಿಲಿಯನ್ = $೧೦^{೯}$ =೧,೦೦೦,೦೦೦,೦೦೦ = ೧೦೦ ಕೋಟಿ.

ಟ್ರಿಲಿಯನ್ = $೧೦^{೧೨}$ = ೧,೦೦೦,೦೦೦,೦೦೦,೦೦೦ = ೧,೦೦,೦೦೦ ಕೋಟಿ

ಆಧಾರ ಗ್ರಂಥಗಳು

1.Cenusus of India , 1991 Government of India, paper 1 , Supplement to paper 1 of 1991. (Provisional Tables).

2. Final Population Tables Census of India 1991.

3. The State of World's Children 1993. UNICEF Publication.

4. Population Reference Bureau 1992 Washington D.C. USA.

5. Population Crisis Committee (1990-91) Washington D.C.

6. ಜನಸಂಖ್ಯಾ ಶಿಕ್ಷಣ ಡಾ|| ಪಿ.ಹೆಚ್. ರೆಡ್ಡಿ ಮತ್ತು ಸಿ.ವಿ. ನಾಗರಾಜ್, ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು.

7. Population Education - A National Source Book (NCERT) NCERT 1991-92.

೮. ಏಡ್ಸ್ - ಭಾರತೀಯ ಕುಟುಂಬ ಯೋಜನಾ ಸಂಘ, ಮೈಸೂರು ಹಾಗೂ ಸರ್ಕಾರದ ಪ್ರಕಟಣೆಗಳು.

ಶುಭವಾಗಲಿ

ಅಸಮತೋಲನದ ಅಪಾಯದಂತೆ ಜನಸಂಖ್ಯೆ ಸ್ಫೋಟಿಸುತ್ತಿರುವುದು. ನಾಗರಿಕ ಸಮಾಜವನ್ನು ದಿಗ್ಭ್ರಮೆಗೊಳಿಸಿ ಚಿಂತೆಗೀಡುಮಾಡಿದೆ. ಈ ಹಿಂದೆ ಇದ್ದ ಸಾಂಕ್ರಾಮಿಕಗಳು ಊರು ಊರನ್ನೇ ಗುಡಿಸಿ ಹಾಕುತ್ತಿದ್ದ ಸನ್ನಿವೇಶ ಈಗಿಲ್ಲ ; ಮರಣದ ಪ್ರಮಾಣವೂ ಗಣನೀಯವಾಗಿ ಕುಗ್ಗಿದೆ. ಜನನದ ಸ್ಫೋಟ ತಡೆಗಟ್ಟಲು ಇರುವ ಮಾರ್ಗವೆಂದರೆ ಜನನ ನಿಯಂತ್ರಣ ಆದರೆ ಕಾನೂನಿನ ಅಡ್ಡಗಾಲೂ ಕೆಲವು ಧರ್ಮೀಯರಿಗೆ ಸಹಕಾರಿಯಾಗಿ ನಿಂತಿದೆ ; ಮನವೊಲಿಸಿಮಾತ್ರವೇ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾದ ಪರಿಸ್ಥಿತಿಯೂ ಉಂಟಾಗಿದೆ ; ಮೂಢನಂಬಿಕೆಗಳಿಗೇನೂ ಕೊರತೆಯಿಲ್ಲ ಇದೆಲ್ಲದರ ನಡುವೆಯೇ ಜನಸಂಖ್ಯಾ ಸ್ಫೋಟ ನಿಯಂತ್ರಣದಲ್ಲಿಡಬೇಕು.

ದೊಡ್ಡ ಸವಾಲಾಗಿ, ದೈತ್ಯಾಕಾರತಾಳಿರುವ ಈ ಸಮಸ್ಯೆಗೆ ಪರಿಹಾರವೇನು ಎಂದು ಈ ಕೃತಿ ಚರ್ಚಿಸುತ್ತದೆ. ನಿಖರ ಅಂಕಿ ಸಂಖ್ಯೆ ನೀಡುತ್ತದೆ.

ಜನಜಾಗೃತಿ ಈ ಕೃತಿಯ ಘನ ಉದ್ದೇಶ.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು